ಎಸ್. ಎಸ್. ಮುನೋಳಿ
S. S. Munoli

ಮಮತಾ ಜಿ. ಸಾಗರ
Mamatha G. Sagar



ಕರ್ನಾಟಕ ಲಲಿತಕಲಾ ಅಕಾಡೆಮಿ
Karnataka Lalithakala Academy

ಎಸ್.ಎಸ್. ಮುನೋಳಿ
S.S. Munoli

ಮಮತಾ ಜಿ. ಸಾಗರ
Mamatha G. Sagar

ಕರ್ನಾಟಕ ಲಲಿತಕಲಾ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೧

Karnataka Lalithakala Academy
14/3, Nrupatunga Road, Bangalore - 560 001

S.S. MUNOLI *a Biograph by* **Mamatha G. Sagar**
Published by ***H. Shankarappa****, Registrar, Karnataka Lalithakala Academy*
Nrupathunga Road, Bangalore - 560 001

Pages : IV P.P. + 20 text + 8 art plate + 4 cover

First Impression : 1998

Price : Rs. 25/-

ಪ್ರಧಾನ ಸಂಪಾದಕರು
ಪ್ರೊ|| ಅಂದಾನಿ ವಿ.ಜಿ.

ಪ್ರಕಟಣಾ ಸಮಿತಿ
ಡಾ|| ಎಚ್. ಚಂದ್ರಶೇಖರ
ಶ್ರೀ ಮಧು ದೇಸಾಯಿ
ಶ್ರೀಮತಿ ರಜನಿ ಪ್ರಸನ್ನ
ಶ್ರೀ ಕೆ.ಎಸ್. ವಿಶ್ವಂಭರ
ಶ್ರೀ ಬಸವರಾಜ ಎಸ್. ಮುಸಾವಳಗಿ

ಪ್ರಕಾಶಕರು
ಶ್ರೀ ಎಚ್. ಶಂಕರಪ್ಪ

Layout Design & Print by

MAYUR PRINT-ADS
Cottonpet Main Road, Bangalore - 560 053. Tele/Fax : 670 0203

ಅಧ್ಯಕ್ಷರ ಮಾತು


ಭಾರತದ ಕಲಾಪರಂಪರೆಗೆ, ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಲೆ ಮತ್ತು ಕಲಾವಿದರ ಬಗ್ಗೆ, ಕಲಾಪ್ರಕಾರಗಳ ಬಗ್ಗೆ ಅನೇಕ ಪುಸ್ತಕಗಳನ್ನು ಮುದ್ರಿಸಿ ಪರಿಚಯಿಸುತ್ತ ಬಂದಿದೆ. ಈ ಪರಂಪರೆಗೆ ಕರ್ನಾಟಕದ "ನಾವು ನಾಲ್ವರು" (1964ರ We-4) ಗುಂಪಿನ ಖ್ಯಾತ ಕಲಾವಿದರಾದ ಮುನೋಳಿಯವರ ಪರಿಚಯ ಈ ಪುಸ್ತಕ ಪ್ರಕಟಣೆಯ ಉದ್ದೇಶ. ಈ ಸರಣಿಯ ಪುಸ್ತಕಗಳು, ಸಮಕಾಲೀನ ಹೆಸರಾಂತ ಕಲಾವಿದರ ಚಿತ್ರ, ಶೈಲಿ, ಬದುಕಿನ ಅನೇಕ ಘಟ್ಟಗಳ ಪರಿಚಯದ ಮೂಲಕ ಅವರ ಸರ್ವಾಂಗೀಣ ವಿಕಾಸದ ಬಗ್ಗೆ ತಿಳುವಳಿಕೆ ಉಂಟು ಮಾಡಲು ಸಹಾಯವಾಗುತ್ತದಲ್ಲದೆ ವೈಜ್ಞಾನಿಕವಾಗಿ, ಸಂಶೋಧನಾತ್ಮಕವಾಗಿ ಬೆಳೆಯುತ್ತಿರುವ ಚಿತ್ರಕಲಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯೂ ಹೌದು.

ಸಮಕಾಲೀನ ಕಲಾವಿದರ ಮಾಲೆಯಲ್ಲಿ, ಶಿವ ಮುನೋಳಿಯವರ ಬಗ್ಗೆ ಅವರನ್ನು ಸಮೀಪದಿಂದ ಕಂಡ ಬರಹಗಾರರು, ಅವರ ಕಲಾಜೀವನದ ಜೊತೆಗೆ ಅವರ ಸೃಜನಶೀಲತೆಯ ವಿಚಾರಗಳ ಕುರಿತು ಸೂಕ್ಷ್ಮತೆಯ ಪರಿಚಯವನ್ನು ಮಾಡಿಸಿ ಕೊಟ್ಟಿದ್ದಾರೆ. ಅವರ ಕಲಾಕೃತಿಗಳ ರಚನೆ, ಅವರ ಅಮೂರ್ತ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಅವರ ಬದುಕಿನ ಸಾಹಸ, ದ್ವಂದ್ವಗಳ ಬಗ್ಗೆ ನಾನು ಸಮೀಪದಿಂದ ಕಂಡಿರುವೆ. ಕರ್ನಾಟಕದ ಸಮಕಾಲೀನ ಕಲಾವಿದರಲ್ಲಿ ಅತಿ ಚಿಂತನಶೀಲ ವ್ಯಕ್ತಿಗಳಲ್ಲಿ ಒಬ್ಬರಾಗಿರುವ ಶಿವ ಮುನೋಳಿ ಅವರ ನಿರಂತರ ಕ್ರಿಯಾಶೀಲತೆಯ ಬಗ್ಗೆ ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿದ್ದಾರೆ. ಅಲ್ಲದೆ ಕಲಾ ಚಟುವಟಿಕೆಗಳ ಮೂಲಕ ಕರ್ನಾಟಕಕ್ಕೆ ಮಹತ್ವದ ಕಾಣಿಕೆ ಸಲ್ಲಿಸಿದ್ದಾರೆ.

ಬರಹಗಾರರಾದ ಶ್ರೀಮತಿ ಮಮತಾ ಜಿ. ಸಾಗರ ಕವಿಯತ್ರಿ, ಕಲಾಪ್ರೇಮಿ ಹಾಗೂ ಚಿತ್ರಕಲೆಯ ಸಾಹಿತ್ಯಕ್ಕೆ ಕುರಿತಂತೆ ಮಹತ್ವದ ಸಾಧನೆ ಮಾಡಿದವರಾಗಿದ್ದಾರೆ. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳನ್ನು ಸಲ್ಲಿಸುವೆ.

ಕಲಾವಿದರು, ಕಲಾರಸಿಕರು ಹಾಗೂ ಕಲಾಕ್ಷೇತ್ರಕ್ಕೆ ಸಂಬಂಧಪಟ್ಟ ಅಭಿಮಾನಿಗಳು ಅಕಾಡೆಮಿಯ ಸಾಧನೆಯನ್ನು ಗುರುತಿಸಿ, ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಪ್ರೊ|| ಅಂದಾನಿ. ವಿ.ಜಿ.
ಅಧ್ಯಕ್ಷರು,
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು



ಎಸ್.ಎಸ್. ಮುನೋಳಿ
S.S. MUNOLI

ಎಸ್.ಎಸ್. ಮುನೋಳಿ

ಕರ್ನಾಟಕದಲ್ಲಿ ನವ್ಯ ಕಲಾ ಪ್ರಕಾರದ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ಉತ್ತೇಜನ ನೀಡಿದ ಹಲವು ಕಲಾವಿದರಲ್ಲಿ ಎಸ್. ಶಿವ ಮುನೋಳಿ ಪ್ರಮುಖರಾದವರು. ಸದಾ ಹೊಸದೇನನ್ನಾದರೂ ಮಾಡಬೇಕೆಂಬ ಹುಮ್ಮಸ್ಸಿನ ಈ ಕಲಾವಿದ, ಕರ್ನಾಟಕದ ಕಲಾಚಟುವಟಿಕೆಗೆ 60ರಲ್ಲಿ ಹೊಸ ಅಲೆಯನ್ನು ತಂದವರು.

ಆರಂಭ

ಕರ್ನಾಟಕ - ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿರುವ 'ವಾಗ್ಧಾರಿ' ಎಂಬ ಪುಟ್ಟ ಊರಿನಲ್ಲಿ 1941ರಲ್ಲಿ ಮುನೋಳಿಯವರು ಜನಿಸಿದರು. ಇವರ ಹಿರಿಯರು ಗುಲ್ಬರ್ಗ ಜಿಲ್ಲೆಯ ಮುನೋಳಿ ಎಂಬ ಪುಟ್ಟ ಗ್ರಾಮದಿಂದ ಬಂದವರು. ತಂದೆ ತೊಗರಿಬೇಳೆ ವ್ಯಾಪಾರಿ ಮತ್ತು ತಾಯಿ ದೊಡ್ಡ ಕುಟುಂಬದ ಉಸ್ತುವಾರಿ ನೋಡಿಕೊಂಡು ಮನೆ ಮತ್ತು ಮಕ್ಕಳ ಜವಾಬ್ದಾರಿ ಹೊತ್ತಾಕೆ. ಗುಲ್ಬರ್ಗಾ ಜಿಲ್ಲೆ ಶೋಲಾಪುರ ಜಿಲ್ಲೆಗಳೆಂದು ಸರ್ಕಾರ ಪ್ರಾಂತ್ಯಗಳನ್ನು ವಿಭಜಿಸಿದಾಗ ಗಡಿ ಪ್ರದೇಶಕ್ಕಿದ್ದ ಮುನೋಳಿಯವರ ಮನೆ ಕರ್ನಾಟಕಕ್ಕೆ ಬಂದು ಹೊಲ ಮಹಾರಾಷ್ಟ್ರದಲ್ಲೇ ಉಳಿಯಿತು.

ಇವರು ವ್ಯಾಸಂಗ ಪ್ರಾರಂಭಿಸಿದಾಗ ಕನ್ನಡ ಶಾಲೆಗಳಿಲ್ಲದ ಕಾರಣ ಮರಾಠಿ ಮಾಧ್ಯಮದಲ್ಲೇ ಓದಬೇಕಾಯ್ತು. ಇವರ ಊರು ಇದ್ದ ಪ್ರದೇಶ ಅರ್ಕಲ್‌ಕೋಟ್ ಸಂಸ್ಥಾನಕ್ಕೆ ಸೇರಿದ್ದಾಗಿದ್ದು, ಆ ಸಂಸ್ಥಾನದ ಮಹಾರಾಜರು ಮರಾಠ ಆಗಿದ್ದರಿಂದ ಆ ಪ್ರಾಂತ್ಯದಲ್ಲಿ ಕೇವಲ ಮರಾಠಿ ಶಾಲೆಗಳನ್ನು ಉತ್ತೇಜಿಸಲಾಗಿತ್ತು. ಮುಂದೆ ಸುಮಾರು ವರ್ಷಗಳು ಇದೇ ಪದ್ಧತಿ ನಡೆದು ಬಂದಿತ್ತು. ಹತ್ತನೇ ಕ್ಲಾಸಿನವರೆಗೆ ಅರ್ಕಲ್‌ಕೋಟ್‌ನಲ್ಲಿ ಕಲಿತು ನಂತರ ಮುಂದೆ ಮರಾಠಿ ಮಾಧ್ಯಮ ಬೇಕಾದವರು ಶೋಲಾಪುರಕ್ಕೆ ಹೋಗಬೇಕಾಗಿತ್ತು. ಕನ್ನಡ ಮಾಧ್ಯಮವನ್ನು ಬಯಸುವವರು ಗುಲ್ಬರ್ಗಕ್ಕೆ ಬರಬೇಕಾಗಿತ್ತು.

ಆಗ ಮಹಾರಾಷ್ಟ್ರ ಸರ್ಕಾರ ನಡೆಸುತ್ತಿದ್ದ ಶಾಲೆಗಳಲ್ಲಿ ಐದನೇ ತರಗತಿಯಿಂದ ವಿಜ್ಞಾನ, ಗಣಿತ ಮುಂತಾದ ವಿಷಯಗಳಂತೆಯೇ ಮಕ್ಕಳ ವ್ಯಾಸಂಗದ ಅನಿವಾರ್ಯ ವಿಷಯವಾಗಿ 'ಕಲೆಯನ್ನು' ಹೇಳಿ ಕೊಡಲಾಗುತ್ತಿತ್ತು. ಶಿವನಿಗೆ ಚಿಕ್ಕಂದಿನಿಂದಲೂ ಕಲೆ ಮತ್ತು ಕುಶಲಕಲೆಯೆಂದರೆ ಹೆಚ್ಚಿನ ವ್ಯಾಮೋಹ.

ಗಣಪತಿ ಹಬ್ಬ ಹತ್ತಿರ ಬಂದರೆ ಸಾಕು, ಕೆರೆಯಿಂದ ಬಿಳಿ ಜೇಡಿಮಣ್ಣನ್ನು ಭಟ್ಟಿ ಇಳಿಸಿ ಗಣೇಶ ವಿಗ್ರಹಗಳನ್ನು ಸುಂದರವಾಗಿ ಮಾಡಿ ಮೆಚ್ಚಿಗೆ ಪಡೆಯುತ್ತಿದ್ದದ್ದು ಮರೆಯಲಾಗದ ಮಾತು. ಗೆಳೆಯರಿಗೆ, ಅಕ್ಕಪಕ್ಕದ ಮನೆಗಳಿಗೆ ವಿಗ್ರಹಗಳನ್ನು ಹಂಚುತ್ತಿದ್ದರು. ಚಿನ್ನದ ಬಣ್ಣ, ಹಳದಿ, ನೀಲಿ, ಕೇಸರಿ ಮುಂತಾದ ಬಣ್ಣಗಳಿಂದ ಗಣಪತಿಯನ್ನು ಶೃಂಗರಿಸುತ್ತಿದ್ದದ್ದು ಈಗಲೂ ಜ್ಞಾಪಿಸಿಕೊಳ್ಳುವಂಥ ಸಂಭ್ರಮ.

ಮನೆಯ ಗೋಡೆಯ ತುಂಬ ಇಜ್ಜಲಿಂದ ಚಿತ್ರಗಳನ್ನು ಬರೆದು ರಂಪಾಟ ಮಾಡುತ್ತಿದ್ದ ಶಿವನ ಮೇಲೆ ತಂದೆ, ತಾಯಿ, ಹಿರಿಕಿಯರಿಗೆಲ್ಲ ಕೋಪ. ಬೈಗುಳವನ್ನು ಕೇಳುತ್ತಿದ್ದದ್ದೇ ತಡ, ಇದ್ದ ಹಗರಣವನ್ನು ಅಲ್ಲೇ ಬಿಟ್ಟು ಓಡುತ್ತಿದ್ದ ಇವನ ಮೇಲೆ ಅಮ್ಮನಿಗೆ ಇನ್ನಷ್ಟು ಸಿಟ್ಟು ಬರುತ್ತಿತ್ತು.

ಶಿವನ ಮುಂದಾಳತ್ವದಲ್ಲಿ ಮುನೋಳಿ ಗಲ್ಲಿ ಹುಡುಗರು ಆಚರಿಸುತ್ತಿದ್ದ ಹೋಳಿ ಹುಣ್ಣಿಮೆ ಹಬ್ಬ ಊರಿಗೇ ಗೊತ್ತಿದ್ದ ಸುದ್ದಿ. ಹೋಳಿ ಹಬ್ಬಕ್ಕೆ ತಿಂಗಳಿದ್ದಾಗಿಂದಲೇ ಸ್ನೇಹಿತರ ಮನೆ, ಅಂಗಡಿ ಜಗಲಿಗಳಲ್ಲಿ ರಾತ್ರಿ ಕಳೆದುಹೋಗುತ್ತಿತ್ತು. ಈ ಕಾಮಣ್ಣನ ಮಕ್ಕಳ ಜೊತೆ ಇಟ್ಟಿಗೆ, ಬೆರಣಿ ಕದ್ದು ಕೂಡಿಡುತ್ತಿದ್ದಾಗ ಸಿಕ್ಕುಬಿದ್ದು ಪೆಟ್ಟುತಿಂದ ವಿಷಯ ನೆನೆದು ಈಗ ನಗು ಬರುತ್ತದೆ, ಎನ್ನುತ್ತಾರೆ ಮುನೋಳಿ.

ನೀರೆಂದರೆ ಹೆದರುತ್ತಿದ್ದ ಶಿವನನ್ನು ಸ್ನೇಹಿತರು ಊರ ಭಾವಿಗೆ ದೂಡಿ ಈಜು ಕಲಿಸಿದ್ದರು. 'ಒಂದು ಸಾರಿ ನೀರಿಗೆ ಬಿದ್ದರೆ ಮೈ ಛಳಿ ಬಿಟ್ಟು ಹೋಗುವುದು' ನಿಜ. ಈ ಎಲ್ಲ ಹಳೆಯ ನೆನಪುಗಳನ್ನು ಜ್ಞಾಪಿಸಿಕೊಳ್ಳುತ್ತಾ, ಕಾಲ ಸರಿದಿದ್ದೇ ತಿಳೀಲಿಲ್ಲ; ಎಂದು ಮುಗುಳ್ನಗುತ್ತಾರೆ ಮುನೋಳಿ.

ಶೋಲಾಪುರದಲ್ಲಿದ್ದ ಚಿಕ್ಕಪ್ಪನಿಗೆ ಜ್ಯೋತಿಶ್ಯಾಸ್ತ್ರದಲ್ಲಿ ನಂಬಿಕೆ. ಶಿವನಿಗೆ ಕಲೆಯ ಬಗ್ಗೆ ಇದ್ದ ಹುಚ್ಚು ಅರಿತು ಅವನ ಜಾತಕ ಫಲ ಕೇಳಿ ನೋಡಿದ್ದರು. ಕಲೆಯೇ ಸರಿಯಾದ ಹಾದಿ ಎಂದು ತಿಳಿದಾಗ ಅವರು ಕೊಟ್ಟ ಪ್ರೋತ್ಸಾಹ ಹೇಳತೀರದ್ದು. ಗುಲ್ಬರ್ಗದಲ್ಲಿ ಪ್ರಾಂಶುಪಾಲರಾಗಿದ್ದ ಮತ್ತೊಬ್ಬ ಚಿಕ್ಕಪ್ಪ ಓದಿನ ಖರ್ಚು ವೆಚ್ಚದ ಜವಾಬ್ದಾರಿ ಹೊತ್ತರು. ಶೋಲಾಪುರದಲ್ಲಿ ಹನ್ನೊಂದನೇ ತರಗತಿ ಮುಗಿದ ಕೂಡಲೆ ಬರೋಡದ ಎಂ.ಎಸ್. ವಿಶ್ವವಿದ್ಯಾಲಯದ ಚಿತ್ರಕಲೆಯ ವಿಭಾಗಕ್ಕೆ ಅರ್ಜಿ ಹಾಕಿಸಿದರು. ಈಗಾಗಲೇ ಹೇಳಿದಂತೆ ಇವರ ಹೊಲ - ಮನೆ ಕರ್ನಾಟಕ ಮಹಾರಾಷ್ಟ್ರಗಳ ಮಧ್ಯೆ ಹಂಚಿಹೋಗಿದ್ದರಿಂದ ಬರೋಡದಿಂದ ಸಂದರ್ಶನಕ್ಕೆ ಬಂದ ಕಾಗದ ವಿಳಾಸದ ಗಡಿಬಿಡಿಯಲ್ಲಿ ಸಮಯಕ್ಕೆ ಸರಿಯಾಗಿ ಇವರ ಕೈ ಸೇರಲಿಲ್ಲ. ಪುನಃ ಇಂಟರ್‌ವ್ಯೂ ಮಾಡಬೇಕೆಂದು ನಡೆದ ಘಟನೆ ತಿಳಿಸಿ ಬರೋಡಾದ ಫೈನ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಿಗೆ ಪತ್ರ ಬರೆದು ಭಿನ್ನವಿಸಿಕೊಂಡರು. ನಂತರ ಎಸ್.ಎಸ್. ಮುನೋಳಿಯವರಿಗಾಗಿ ಪ್ರತ್ಯೇಕ ಇಂಟರ್‌ವ್ಯೂ ನಡೆಸಲಾಯಿತು. ಇಂಟರ್‌ವ್ಯೂ ಪ್ಯಾನಲ್‌ನಲ್ಲಿ ಫೈನ್ ಆರ್ಟ್ಸ್‌ನಿಂದ ಬೇಂದ್ರೆಯವರು, ಶಿಲ್ಪ ಕಲೆಯಿಂದ ಶಂಖ ಚೌಧರಿಯವರು ಹಾಗೂ ಕಮರ್ಷಿಯಲ್ ಆರ್ಟ್ಸ್ ವಿಭಾಗದಿಂದ ಪಂಚೋಲಿಯವರು ಇದ್ದರು. ಆಗ ಇಂಟರ್‌ವ್ಯೂ ಎಂದರೆ ಆಬ್ಜೆಕ್ಟ್ ಡ್ರಾಯಿಂಗ್ ಮತ್ತು ಮೆಮೊರಿ ಡ್ರಾಯಿಂಗ್ ಇರುತ್ತಿತ್ತು. ಬೇಂದ್ರೆಯವರು ಮಳೆಗಾಲದ ಒಂದು ಕಾಂಪೊಸಿಷನ್ ಮಾಡಲು ಹೇಳಿದರು.

"ಆಗ ಗ್ರೇಡ್ ಸಿಸ್ಟಮ್ ಇತ್ತು 'ಎ', 'ಬಿ+', 'ಬಿ', 'ಸಿ'...ಹೀಗೆ. ಅಂಕಿ ಕೊಡುತ್ತಿರಲಿಲ್ಲ" ಮರುದಿನ ಬೇಂದ್ರೆಯವರು ಬಂದು 'ಬಿ+' ಗ್ರೇಡಿನಲ್ಲಿ ಮುನೋಳಿಯವರು ಆಯ್ಕೆಯಾಗಿದ್ದಾರೆಂದು ತಿಳಿಸಿದರು. ಹೀಗೆ 1959ರಲ್ಲಿ ಬರೋಡದ ಎಂ. ಎಸ್. ವಿಶ್ವವಿದ್ಯಾಲಯದ ಚಿತ್ರಕಲೆಯ ವಿಭಾಗಕ್ಕೆ ಶ್ರೀ ಮುನೋಳಿಯವರು ವಿದ್ಯಾರ್ಥಿಯಾಗಿ ಸೇರಿದರು.

ಬರೋಡದ ದಿನಗಳು

ಮೊದಲು ಅಲ್ಲಿಗೆ ಹೋದಾಗ ಯಥಾವತ್ ಒಬ್ಬ ಹಳ್ಳಿ ಹುಡುಗನಾಗಿ ಒಂದು ಪೈಜಾಮ ಬುಶ್ ಶರ್ಟು ತೊಟ್ಟು ಮುನೋಳಿ ನೇರವಾಗಿ ಸಂಪರ್ಕಿಸಿದ್ದು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ದೊಡ್‌ವಾರದ ಮಠದ್ ಅನ್ನುವವರನ್ನು. ಗುಲ್ಬರ್ಗದ ಚಿಕ್ಕಪ್ಪನ ಪರಿಚಿತರಾದ ಇವರೊಂದಿಗೆ ಸ್ವಲ್ಪಕಾಲ ಅವರ ರೂಮ್‌ನಲ್ಲಿ ಮುನೋಳಿಯವರು ಇದ್ದರು; ವಿಶ್ವವಿದ್ಯಾಲಯದಲ್ಲಿ ಹಾಸ್ಟೆಲ್‌ನ ವ್ಯವಸ್ಥೆ ಸಿಕ್ಕುವವರೆಗೆ.

ಆ ಡಾಕ್ಟರ್ ಅವರ ಸ್ನೇಹಿತರು ಕಾಲಿಗೆ ಚಪ್ಪಲಿಯನ್ನೂ ಹಾಕದೆ ಬಂದಿಳಿದ ಇವರನ್ನು ನೋಡಿ ಊರಿಂದ ಯಾರೋ ಕೆಲಸದ ಆಳನ್ನು ಕರೆಸಿಕೊಂಡಿರಬೇಕು ಅಂದುಕೊಂಡಿದ್ದರು. ಇನ್ನೂ ಕೆಲವರು ಆ ಡಾಕ್ಟರಿಗೆ 'ಏನಪ್ಪಾ ಏನ್ ಗೆಸ್ಟ್ ಬಂದಾರೆ' ಎಂದು ತಮಾಷೆಯನ್ನು ಮಾಡಿದ್ದರು. ಮೊದಲೇ ಚಿಕ್ಕಹಳ್ಳಿಯಿಂದ ಬಂದ ಮುನೋಳಿಗೆ ಇದ್ದ ಭಯದ ಜೊತೆಗೆ ಕೀಳರಿಮೆಯನ್ನು ಅನುಭವಿಸತೊಡಗಿದರು. ಒಂದು ಸಾರಿ ಕಾಲೇಜಿಗೆ ಹೋಗಲು ಆರಂಭಿಸಿದ ನಂತರ ಎಲ್ಲವೂ ನಿಧಾನವಾಗಿ ಸರಿಹೋಯ್ತು.

ಬರೋಡದಲ್ಲಿ ಕಳೆದ ಪ್ರತಿ ಕ್ಷಣವೂ ಒಂದು ಹೊಸ ಅನುಭವ. ಪೈಜಾಮ ಬುಶ್ ಶರಟು ತೊಟ್ಟು ಹೋಗಿದ್ದ ಹಳ್ಳಿ ಹುಡುಗನಿಗೆ ಇದೇ ವಾತಾವರಣವೇ ಒಂದು ದಿಗ್ಭ್ರಮೆ ಹುಟ್ಟಿಸುವಂಥಾದ್ದು. ಹುಡುಗ - ಹುಡುಗಿಯರು ಒಬ್ಬರಿಗೊಬ್ಬರು ಮಾತಾಡುವುದೇ ಅಪರೂಪವೆಂಬ ಪರಿಸರದಿಂದ ಬಂದ ಮುನೋಳಿಯವರ ತರಗತಿಯಲ್ಲಿ ಗಂಡು ಹೆಣ್ಣೆಂಬ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಿಗೆ ಕೂರುತ್ತಿದ್ದರು, ಒಟ್ಟಿಗೆ ಊಟ ಮಾಡುತ್ತಿದ್ದರು ಮತ್ತು ಒಟ್ಟಿಗೆ ಮೋಜು ಮಾಡುತ್ತಿದ್ದರು. ಏಕಾಂಗಿತನ, ಮುಜುಗರ ಮತ್ತು ಕೀಳರಿಮೆಗಳಿಂದ ಹೊರಬರಲು ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ.

ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ಅಲ್ಲಿಗೆ ಓದಲು ಬರುತ್ತಿದ್ದರು. ವಿವಿಧ ಮೈಬಣ್ಣ, ವೈವಿಧ್ಯಮಯ ಉಡುಪುಗಳನ್ನು ತೊಟ್ಟ ವಿದ್ಯಾರ್ಥಿಗಳು ಸುಲಲಿತವಾಗಿ ಇಂಗ್ಲಿಷ್ ಮಾತನಾಡುತ್ತಿದ್ದದ್ದು ಇನ್ನೊಂದು ದೊಡ್ಡ ಭಯ ಹುಟ್ಟಿಸುವಂಥದ್ದಾಗಿತ್ತು, ರಾಜ ಮಹಾರಾಜರ ಮನೆತನದ ಹುಡುಗರು ಕಲಿಯಲು ಅಲ್ಲಿಗೆ ಬರುತ್ತಿದ್ದರು ಮತ್ತು ಅವರೆಲ್ಲ ಆರ್ಥಿಕವಾಗಿ ಪ್ರಬಲರೂ ಆಗಿದ್ದರು. ಕ್ರಮೇಣ ಗೆಳೆಯ ಗೆಳತಿಯರ ಪ್ರೀತಿ ಆತ್ಮೀಯತೆ ಮುನೋಳಿಯವರನ್ನು ಸಂಕೋಚದ ಚಿಪ್ಪಿನಿಂದ ಹೊರಗೆಳೆಯಿತು. ನಂತರ ಅವರ ಬದುಕಿನಲ್ಲೇ ಮಹತ್ತರವಾದ ಬದಲಾವಣೆ. ಕಾಪಿ ಮಾಡುವುದು ಅಥವ ಸೈನ್ ಬೋರ್ಡ್ ಬರೆಯುವುದೇ ದೊಡ್ಡ ಕಲೆ ಅಂದುಕೊಂಡಿದ್ದ ಮುನೋಳಿಯವರಿಗೆ ಕಲೆಯ ಹತ್ತಾರು ಮುಖಗಳ ಪರಿಚಯವಾಗುತ್ತಾ ಹೋಯ್ತು. 'ಲ್ಯಾಂಡ್‌ಸ್ಕೇಪ್' ಇವರ ಅಚ್ಚು ಮೆಚ್ಚಿನ ಚಿತ್ರಣ ಶೈಲಿ. ಆಬ್ಜೆಕ್ಟ್ ಡ್ರಾಯಿಂಗ್, ಸ್ಟಿಲ್ ಲೈಫ್, ಗ್ರಾಫಿಕ್, ಶಿಲ್ಪಕಲೆ ಮುಂತಾದ ಮಾಧ್ಯಮಗಳಲ್ಲೂ ಪರಿಣತಿಯನ್ನು ಪಡೆದರು.

ಸ್ನೇಹಿತರ ಜೊತೆಗೆ ಸ್ಪಾಟ್ ಸ್ಕೆಚ್ಚಿಂಗ್‌ಗೆ ಹೋಗುತ್ತಿದ್ದದ್ದು ಒಂದು ನೆನಪು. ಆಗ ಬರೋಡ ಕಲಾ ಶಾಲೆಯ ಸುತ್ತ ಹಸಿರು ಬೈಲು ಹಮ್ಮಿಕೊಂಡಿತ್ತು. ದೂರ ದೂರದ ತನಕ ಹಬ್ಬಿದ್ದ ಈ ಹುಲ್ಲುಗಾವಲಿನಲ್ಲಿ ಹಸು, ಕರು, ಎಮ್ಮೆಗಳನ್ನು ಮೇಯಿಸಲು ದನ ಕಾಯುವ ಹುಡುಗರು ಬರುತ್ತಿದ್ದರು. ಅಲ್ಲಿ ಸದಾ ಒಂದಿಲ್ಲೊಂದು ಎಮ್ಮೆಯ ದಂಡು ಇದ್ದೇ ಇರುತ್ತಿತ್ತು. ಹಾಗಾಗಿ ಆಗೆಲ್ಲ ಸ್ಪಾಟ್ 'ಸ್ಕೆಚ್ಚಿಂಗ್' ಅನ್ನಲು ಹುಡುಗರು 'ಎಮ್ಮೆ ಕಾಯುವುದು' ಎಂದು ಹೆಸರಿಟ್ಟಿದ್ದರು. ಕಾಮಾಟಿ ಭಾಗ್‌ನ ಎದುರಿಗಿದ್ದ ಜೂಗೆ ಸಹ ಸ್ಪಾಟ್ ಸ್ಕೆಚ್ಚಿಂಗ್‌ಗೆಂದು ಹೋಗುತ್ತಿದ್ದದ್ದುಂಟು.

ಕಾಲೇಜಿನ ವಾತಾವರಣ ಬಹಳಾ ಆತ್ಮೀಯವಾಗಿತ್ತು. ಜ್ಯೋತಿ ಭಟ್, ವಿನೋದ್ ಶಹ, ಗುಲಾಮ್ ಮಹಮ್ಮದ್ ಶೇಖ್ ಮುಂತಾದವರು ಕಡೇ ವರ್ಷದ ವಿದ್ಯಾರ್ಥಿಗಳಾಗಿದ್ದರು. ದಸರ ಬಂದರೆ ಗರ್ಭ ಆಡುವುದು, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು. ಚಿಕ್ಕ ಪುಟ್ಟ ಕುಶಲಕಲಾ ಸಾಮಗ್ರಿಗಳನ್ನು ಮಾಡಿ ಫನ್ ಫೇರ್‌ನಲ್ಲಿ ಮಾರುವುದು ಮುಂತಾಗಿ ಮೋಜು ಮಾಡುತ್ತಿದ್ದ ಆ ದಿನಗಳು ಈಗೊಂದು ಸವಿ ನೆನಪು.

ಕ್ರಮೇಣ ಹೊಸ ವಾತಾವರಣ, ಹೊಸ ಜನ ಎನ್ನುವುದನ್ನೆಲ್ಲಾ ಮರೆತು ಸ್ನೇಹಿತರ ಜೊತೆಯಲ್ಲಿ ಮುನೋಳಿ ಬೆರೆತುಬಿಟ್ಟರು. ಇವರ ಅಚ್ಚುಮೆಚ್ಚಿನ ಗೆಳೆಯರ ಗುಂಪಲ್ಲಿ ಗೋಪಾಲ್ ಗುಪ್ತ, ಸುರೇಶ್ ಸೇತ್, ಪಟೇಲ್, ಬೋವಾಲೇಕರ್, ದಳವಾಡಿ, ರಮಾ ಸುರತಿ, ಮೀರಾ ದೀಕ್ಷಿತ್, ಬಿಮಾನಿ ಮತ್ತು ಹಕಿಮ್ ಇರುತ್ತಿದ್ದರು. ಎಲ್ಲರೂ ಬಹಳ ಮೋಜಿನ ಮಂದಿಯಾಗಿದ್ದರೂ ಗುರುಗಳಿಗೆ ಅಚ್ಚು ಮೆಚ್ಚು.

ಕ್ಲಾಸಿನಲ್ಲಿ ಎಲ್ಲರಿಗಿಂತ ಕಿರಿಯವರಾಗಿದ್ದ ಮುನೋಲಿ ಎಲ್ಲರಿಗೂ ಪ್ರೀತಿಯ 'ಮುನ್ನ'. ಹಬ್ಬ ಹರಿದಿನಗಳಲ್ಲಿ ಬರೋಡದಲ್ಲೇ ಇದ್ದ ವಿದ್ಯಾರ್ಥಿ ಗೆಳತಿಯರು ಸ್ನೇಹಿತರನ್ನು ಊಟಕ್ಕೆಂದು ಮನೆಗೆ ಕರೆದುಕೊಂಡು ಹೋಗುತ್ತಿದ್ದರು, ಇಲ್ಲವೆ ಹಬ್ಬದ ಮರುದಿನ ತಿಂಡಿ ಕಟ್ಟಿಕೊಂಡು ಬರುತ್ತಿದ್ದರು. ಸ್ನೇಹಿತರ ಪ್ರೀತಿಯಲ್ಲಿ ಮನೆಯ ನೆನಪೂ ಆಗದಷ್ಟು ಆತ್ಮೀಯತೆ ಇತ್ತು.

ಆರಂಭದಲ್ಲಿ ಮುನೋಳಿಯವರ ಚಿತ್ರಗಳು ಫಿಗರೇಟೀವ್ ಆಗಿದ್ದು ಕ್ರಮೇಣ ಅವರ ಆಸಕ್ತಿ ಅಮೂರ್ತದ ಕಡೆಗೆ ವಾಲಿತು. ಫಿಗರೇಟಿವ್ ಮತ್ತು ಲ್ಯಾಂಡ್‌ಸ್ಕೇಪ್ ಚಿತ್ರಗಳನ್ನು ಮಾಡುತ್ತಿದ್ದ ಮುನೋಲಿಯವರು ತಮ್ಮ ಕ್ರಿಯಾತ್ಮಕ ಮಾಧ್ಯಮವನ್ನು ಸರಿಯಾಗಿ ಅರ್ಥೈಸಿಕೊಂಡಿದ್ದು ಬರೋಡದಲ್ಲಿ ಫಿಗರ್ ಡಿಸ್ಟಾರ್‌ಷನ್‌ನಲ್ಲೂ ಸಮತೋಲನವಾದ ಅನಾಟಮಿಯ ಅವಶ್ಯಕತೆ ಅತಿ ಮುಖ್ಯ ಎನ್ನುವುದು ತಿಳಿದಿದ್ದು ಅಲ್ಲೇ.

'ಕಲಾವಿದ ಕಲೆಯನ್ನು ಎರಡು ರೀತಿಯಿಂದ ಕಲಿಯಬಲ್ಲ'

1. ವಿಶ್ವವಿಖ್ಯಾತ ಕಲಾವಿದರ ಚಿತ್ರಗಳನ್ನು ಅರ್ಥೈಸಿಕೊಂಡು ಅಥವಾ
2. ಪ್ರಕೃತಿಯನ್ನು ಸರಿಯಾಗಿ ಗಮನಿಸಿ ಅರ್ಥಮಾಡಿಕೊಳ್ಳುವುದರಿಂದ' ಅನ್ನುತ್ತಿದ್ದ ಬೇಂದ್ರೆಯವರ ಮಾತುಗಳಲ್ಲಿ ಮುನೋಳಿ ಸತ್ಯಾಂಶವನ್ನು ಕಂಡುಕೊಂಡರು. ಕಲಾವಿದನಿಗೆ ಅಬ್‌ಸರ್‌ವೇಷನ್ ಬಹಳ ಮುಖ್ಯ ಅನ್ನುತ್ತಾರೆ ಮುನೋಳಿ.

ಎರಡನೇ ವರ್ಷದಲ್ಲಿ ಸಾಂಪ್ರದಾಯಿಕ ಚಿತ್ರಕಲೆ ಎಂಬ ವಿಷಯದಲ್ಲಿ 'ಕಾಪೀಯಿಂಗ್ ಮಿನಿಯೇಚರ್ಸ್' ಎಂಬ ಒಂದು ವಿಷಯವಿತ್ತಂತೆ. ಎರಡು ತಿಂಗಳ ಕಾಲ ಯಾವುದಾದರೂ ಮಿನಿಯೇಚರ್; ಮೊಗಲ್, ಜೈನ್, ಕಾಂಗ್ರಾ... ಹೀಗೆ ಯಾವುದಾದರೂ ಸರಿ; ಒಂದು ಮಿನಿಯೇಚರ್‌ನ್ನು ಕಾಪಿ ಮಾಡಬೇಕಿತ್ತು.ಇದು ಅನಿವಾರ್ಯ ವಿಷಯವಾದ್ದರಿಂದ ಮಾಡಲೇಬೇಕಾಗಿತ್ತು. ಮುನೋಳಿಯವರು ಕಾಂಗ್ರಾ ಸೂಕ್ಷ್ಮ ಚಿತ್ರದಲ್ಲಿ ನಕಲು ಮಾಡಿದ್ದರು.

ವ್ಯಾನ್‌ಗೊ ಮತ್ತು ಪಿಕಾಸ್ಸೊ ಅವರ ಅಚ್ಚುಮೆಚ್ಚಿನ ಕಲಾವಿದರು. ಹೊಸತನಕ್ಕಾಗಿ ತಹತಹಿಸುವ ಕಾತರ ಈ ಕಲಾವಿದರ ಚಿತ್ರಗಳ ಪ್ರಮುಖ ಆಕರ್ಷಣೆ. ವ್ಯಾನ್‌ಗೊನ ಬಣ್ಣಗಳ ಮೇಲಿನ ಹಿಡಿತ, ಚಿತ್ರಗಳ ಕಾಂಪೋಜಿಷನ್ ಮತ್ತು ಕಲರ್ ಸ್ಟ್ರೋಕ್ಸ್ ಇವರ ಮೇಲೆ ಪ್ರಭಾವ ಬೀರಿತು.

ಪಿಕಾಸ್ಸೊನ ಡಿಸ್ಟಾರ್‌ಷನ್ ನೋಡಿದರೆ ಅವನ ಕಲಾಕೃತಿಗಳಲ್ಲಿ ಅದು ಅನಾಟಮಿಯನ್ನು ಸ್ಪಷ್ಟವಾಗಿ ತಿಳಿದು ಆನಂತರ ಉದ್ದೇಶಪೂರ್ವಕವಾಗಿ ಮಾಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಸೌಂದರ್ಯ ಶಾಸ್ತ್ರವನ್ನು ಪ್ರೊ|| ಶಾಸ್ತ್ರಿ ಎಂಬುವರು ಗುಜಾರಾತಿಯಲ್ಲಿ ಪಾಠ ಹೇಳುತ್ತಿದ್ದರು. ಅವರು ಗುಜರಾತಿಯಲ್ಲೇ ಈ ವಿಷಯವನ್ನು ಕುರಿತು ಪುಸ್ತಕವನ್ನು ಬರೆದಿದ್ದರು. ಮುನೋಳಿಯವರ ಮರಾಠಿ ಲಿಪಿಯ ಜ್ಞಾನ ಈಗ ಗುಜರಾತಿ ಕಲಿಯಲು ಅನುಕೂಲಕ್ಕೆ ಬಂತು.ಅರುಣ್ ಖಿಮಾನಿ ಎಂಬ ಗೆಳೆಯ (ಈಗ ಜೆ.ಜೆ. ಯಲ್ಲಿ ಪ್ರೊಫೆಸರ್ ಆಗಿದ್ದಾರೆ) ಕ್ಲಾಸಿನ ನಂತರದ ವೇಳೆಯಲ್ಲಿ ಗುಜರಾತಿಯ ಸೌಂದರ್ಯ ಶಾಸ್ತ್ರವನ್ನು ಹಿಂದಿಗೆ ಭಾಷಾಂತರಿಸಿ ಹೇಳುತ್ತಿದ್ದರು. ಶೃಂಗಾರ, ರೌದ್ರ, ಭೀಭತ್ಸ, ಶಾಂತ ಹೇಗೆ ಹಲವಾರು ರಸಗಳನ್ನು ಶಾಸ್ತ್ರಿಗಳು ಕುಡಿಸುತ್ತಿದ್ದರೂ ಸಹ ಒಟ್ಟು ಅವರ ಕ್ಲಾಸ್ ಎಂದರೆ ಎಲ್ಲರೂ 'ಭಯ ರಸ' ವೆಂದು ಹೊಸತೊಂದು ರಸದ ಹೆಸರನ್ನೇ ಇಟ್ಟಿದ್ದರು.

ಬರೋಡಕ್ಕೆ ಬೇರೆ ಬೇರೆ ಕಡೆಗಳಿಂದ ಕಲಾವಿದರು ಬಂದು ತಮ್ಮ ಕಲಾಕೃತಿಗಳ ಪ್ರದರ್ಶನ ಮಾಡುತ್ತಿದ್ದರು. ವಿ.ಎಂ. ಮಾಳಿ ಮತ್ತು ಕೆ.ಕೆ. ಹೆಬ್ಬಾರರಂಥ ಕಲಾವಿದರು ಡೆಮಾನ್‌ಸ್ಟ್ರೇಷನ್ ಕ್ಲಾಸುಗಳನ್ನು ತೆಗೆದುಕೊಳ್ಳುತ್ತಿದ್ದರು. ದೇಶವಿದೇಶಗಳಿಂದ ಕಲಾವಿದರನ್ನು ವಿಶೇಷ ಪ್ರಾಧ್ಯಾಪಕರಾಗಿ ಬರಮಾಡಿಕೊಳ್ಳಲಾಗುತ್ತಿತ್ತು.

ಉಳಿದ ಕಲಾ ಶಾಲೆಗಳು ರಿಯಲಿಸ್ಟಿಕ್ ಕಲೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರೆ, ಬರೋಡ ಕಲಾ ಶಾಲೆ ವಿದ್ಯಾರ್ಥಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ ಅವರ ಕ್ರಿಯಾತ್ಮಕತೆಯನ್ನು ಭಿನ್ನ ಭಿನ್ನ ದಿಕ್ಕುಗಳಲ್ಲಿ ಬೆಳೆಯಲು

ಅವಕಾಶ ನೀಡಿತು. ಇದು ಮಹತ್ತರವಾದ ವಿಚಾರ ಅನ್ನುತ್ತಾರೆ ಮುನೋಳಿ. ಆಗ ಪ್ರಾಧ್ಯಾಪಕರಾಗಿದ್ದ ಕೆ.ಜೆ. ಸುಬ್ರಹ್ಮಣ್ಯಂ, ಜ್ಯೋತಿಭಟ್, ವಿನೋದ್ ಶಹ ಮುಂತಾದವರೂ ಕೂಡ ಹೊಸತನ್ನು ಹುಡುಕುತ್ತಿದ್ದ ಕಲಾವಿದರು.

"ವಿನೋದ್ ಶಹ ಒಳ್ಳೆಯ ಲ್ಯಾಂಡ್‌ಸ್ಕೇಪ್ ಕಲಾವಿದರು ಸ್ಪಾಟಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಜಲವರ್ಣ ಚಿತ್ರಗಳನ್ನು ಮಾಡಿತೋರಿಸುತ್ತಿದ್ದರು". ಎಂದು ನೆನೆಯುತ್ತಾರೆ ಮುನೋಳಿ.

"ಸ್ನೇಹಿತರಲ್ಲಿ ಗೋವಾಲೇಕರ್ ಸ್ಟಿಲ್‌ಲೈಫ್, ಪೋಟ್ರೈಟ್ ಮತ್ತು ಇತರ ರಿಯಲಿಸ್ಟಿಕ್ ಕೆಲಸವನ್ನು ತುಂಬಾ ಚೆನ್ನಾಗಿ ಮಾಡುತ್ತಿದ್ದರು. ಪಟೇಲ್ ಕಾಂಪೊಸಿಷನ್‌ನಲ್ಲಿ ಚತುರ ಮತ್ತು ನನಗೆ ರ್‍ಯಾಪಿಡ್ ಸ್ಕೆಚ್ಚಿಂಗ್ ಬಹಳಾ ಖುಷಿಕೊಡುತ್ತಿದ್ದ ವಿಷಯ", ಎಂದು ಮುನೋಳಿಯವರು ಜ್ಞಾಪಿಸಿಕೊಳ್ಳುತ್ತಾರೆ.

ಸ್ನೇಹಿತರೆಲ್ಲ ಸೇರಿ ಪರಸ್ಪರ ಕೆಲಸದ ಬಗ್ಗೆ ಚರ್ಚಿಸುತ್ತಿದ್ದರಂತೆ. ಒಬ್ಬರಿಂದ ಒಬ್ಬರು ಸಲಹೆ ಪಡೆಯುತ್ತಿದ್ದರಂತೆ. ಹಾಗಾಗಿ ಕೆಲಸ ಮಾಡಲು ಒಳ್ಳೆಯ ವಾತಾವರಣವಿತ್ತು. ಇವರ ಗುಂಪೆಂದರೆ ಎಲ್ಲ ಅಧ್ಯಾಪಕರಿಗೂ ಪ್ರೀತಿ. ಕಾಲೇಜಿನ ಎದುರಿಗಿದ್ದ ಗೇಟಿನ ಸರಳುಗಳ ಮೇಲೆ ಕೂತು ಹರಟೆ ಹೊಡೆಯುತ್ತಿದ್ದರು. ಪ್ರವಾಸಕ್ಕೆ ಹೋದಾಗಲೆಲ್ಲಾ ಹೆಣ್ಣುಮಕ್ಕಳು ಸದಾ ಇವರ ಗುಂಪಿನ ಜೊತೆಗೇ ಇರುತ್ತಿದ್ದರು. "ನಾವು ಎಲ್ಲರೂ ನೋಡೋದಕ್ಕೆ ಬಹಳಾ ಸ್ಮಾರ್ಟಾಗಿದ್ದೆವು ಅಂತಲೋ ಅಥವಾ ಯಾವುದೇ ರೀತಿಯಿಂದಲೂ ಏನೂ ತೊಂದರೆ ಕೊಡಲಾರದ ಹೆದ್ದರು ಅಂತಲೋ ಗೊತ್ತಿಲ್ಲ. ಒಟ್ಟಲ್ಲಿ ಅವರೆಲ್ಲ ನಮ್ಮ ಜೊತೆಗಿದ್ದರೆ ನಮಗಂತೂ ಖುಷಿ ಆಗುತ್ತಿದ್ದದ್ದು ನಿಜ", ಎಂದೂ ದೊಡ್ಡದಾಗಿ ನಗುತ್ತಾರೆ ಮುನೊಳಿ.

ಆಗ ಮನೆಯಿಂದ ಅರವತ್ತು ರೂಪಾಯಿ ಹಣ ಬರುತ್ತಿತ್ತು. ಅದರಲ್ಲಿ ರೂ. 30 ಮೆಸ್ಸಿಗೆ ಕೊಟ್ಟರೂ ಕಷ್ಟ ಅನ್ನಿಸುತ್ತಿರಲಿಲ್ಲ. ಸದಾ ಕಾಲೇಜಿನಲ್ಲೇ ಕಾಲ ಕಳೆಯುತ್ತಿದ್ದ ಮುನೋಳಿ, ಸ್ನೇಹಿತರ ಜೊತೆ ರಾತ್ರಿಯ ಊಟವನ್ನು ಹಾಸ್ಟೆಲ್‌ನಿಂದ ತಂದು ಸ್ಟುಡಿಯೋದಲ್ಲೇ ಉಂಡದ್ದುಂಟು. ಬರೋಡದಲ್ಲಿನ ಮೂರೂ ವರ್ಷಗಳೂ ಬೇಸಿಗೆ ರಜೆಗೆಂದು ಮನೆಗೆ ಬರಲೇ ಇಲ್ಲ. ಆಗ ಅಚ್ಚುಮೆಚ್ಚಿನ ವಿದ್ಯಾರ್ಥಿಗಳ ಊಟದ ಖರ್ಚನ್ನೂ ಸಹ ಅಧ್ಯಾಪಕರುಗಳೇ ನೋಡಿಕೊಂಡು ಅವರನ್ನು ತಮ್ಮ ಕೆಲಸಗಳಿಗೆ ಸಹಾಯ ಮಾಡಲು ತೊಡಗಿಸಿಕೊಳ್ಳುತ್ತಿದ್ದರು. ಜೊತೆಗೆ ಕೆಲಸ ಮಾಡುತ್ತಿದ್ದ ಅಧ್ಯಾಪಕರುಗಳ ಚಿತ್ರಗಳನ್ನು ರಚನಾ ಮಾದರಿಯನ್ನು ಬಹಳಾ ಹತ್ತಿರದಿಂದ ನೋಡುವ, ತಿಳಿದುಕೊಳ್ಳುವ ಅವಕಾಶ ದೊರಕುತ್ತಿತ್ತು.

ಶಂಖು ಚೌಧರಿಯವರಿಗೆ ಅಲೆಂಬಿಕ್ ಸಾರಭಾಯ್ ಕೆಮಿಕಲ್ಸ್ ಅವರ ಜೊತೆಗೆ ಒಳ್ಳೆಯ ಸಂಬಂಧವಿತ್ತು. ರಜೆಯಲ್ಲಿ ಬರೋಡದಲ್ಲೇ ಉಳಿಯುತ್ತಿದ್ದ ಹುಡುಗರಿಗೆ ಅಲ್ಲಿ ದಿನಕ್ಕೆ ಆರೇಳು ಗಂಟೆಗಳ ಕೆಲಸ ಕೊಡಿಸುತ್ತಿದ್ದರು. ಬಂದ ಔಷಧಿಗಳನ್ನು ಎಣಿಸಿ ಬ್ಯಾಗಿಗೆ ತುಂಬುವುದು; ಇದಕ್ಕೆ ಒಟ್ಟು ರೂ. 200-300ರಷ್ಟು ಸಿಗುತ್ತಿತ್ತು. ಅದು ಮೇಲಿನ ಖರ್ಚನ್ನೆಲ್ಲಾ ನೋಡಿಕೊಳ್ಳುತ್ತಿತ್ತು.

ಒಮ್ಮೆ ಶಂಖು ಚೌಧರಿಯವರಿಗೆ 24 ಅಡಿ ಎತ್ತರದ ಗಾಂಧಿ ವಿಗ್ರಹವನ್ನು ಮಾಡಿಕೊಡಲು ಕಮಿಶನ್ಡ್ ವರ್ಕ್ ಸಿಕ್ಕಿತ್ತು. ವಿಗ್ರಹವನ್ನು ಕಾಸ್ಟ್ ಮಾಡುತ್ತಿದ್ದ ಸ್ಥಳದಲ್ಲಿ ಎಲ್ಲರೂ ಸೇರುತ್ತಿದ್ದರು. ಎಲ್ಲವೂ ಸರಿಯಾಗೇ ಬಂದರೂ ಗಾಂಧಿ ತಲೆ ಮಾತ್ರ ತಕರಾರು ಕೊಡುತ್ತಿತ್ತು. ಒಮ್ಮೆ ತಲೆಯಲ್ಲಿ ತೂತು ಬಿದ್ದರೆ, ಇನ್ನೊಮ್ಮೆ ಕಿವಿಯೋ, ಮೂಗೋ, ಇರುತ್ತಿರಲಿಲ್ಲ. 'ಗಾಂಧಿ ತಲೆ ಅಂಥಾ ಸುಲಭದ್ದೇನಲ್ಲ', ಅನ್ನೊ ಮಾತು ಪ್ರಚಾರಕ್ಕೆ ಬಂತು. 'ಗಾಂಧಿ ತಲೆ' ಒಂದು ಜೋಕ್ ಆಗಿಬಿಟ್ಟಿತ್ತು. ಕೆಲಸ ಮಾಡುವಾಗ ಏನಾದರೂ ಕೊಂಚ ಕೆಟ್ಟರೂ, 'ಗಾಂಧಿ ತಲೆ!' ಎಂದು ಹುಡುಗರು ಗೊಣಗುತ್ತಿದ್ದರು.

ಒಂದಲ್ಲ, ಎರಡಲ್ಲ... ಬರೋಡದ ದಿನಗಳು ಒಂದು ಸುಂದರ ನೆನಪು. ಹೀಗೆ ಹೊತ್ತು ಗೊತ್ತಾಗದ ಹಾಗೆ ದಿನಗಳುರುಳಿ ವ್ಯಾಸಂಗ ಮುಗಿದಿತ್ತು. ಎಲ್ಲರೂ ರಿಸಲ್ಟ್‌ಗಾಗಿ ಕಾಯುತ್ತಾ ಕುಳಿತಿದ್ದಾಗ ಮಣಿಸರ್ ಮುನೋಳಿಯವರ ಹತ್ತಿರ ಬಂದು ಅವರ ಕೈಗೆ ರೂ. 100 ಕೊಟ್ಟು, 'ಮಿಠಾಯಿ ತಂದು ಎಲ್ಲರಿಗೂ ಹಂಚು. ನಿನ್ನದು ಪಾಸಾಗಿದೆ' ಎಂದಿದ್ದರು. "ಜೀವನದ ಈ ಕ್ಷಣವನ್ನು ನಾನೆಂದೂ ಮರೆಯಲಾರೆ. ನನಗೆ ಸಂತೋಷದಿಂದ ಕಣ್ಣಲ್ಲಿ ನೀರೇ ಬಂದಿತ್ತು". ಎಂದು ನೆನೆಯುತ್ತಾರೆ ಎಸ್.ಎಸ್. ಮುನೋಳಿ.

ಆಮೇಲೇನು ....

ಬರೋಡದಿಂದ ಬಂದ ಮೇಲೆ ಮೂರು ತಿಂಗಳು ಮನೆಯಲ್ಲಿದ್ದು ನಂತರ ಮುಂಬೈಗೆ ಹೋದರು. ಅಲ್ಲಿ ಒಂದು ಪ್ರೈವೇಟ್ ಟೆಕ್ಸ್‌ಟೈಲ್ ಏಜೆನ್ಸಿಯಲ್ಲಿ ಕೆಲಸ ದೊರಕಿತು. ರೈಲಿನಲ್ಲಿ ಸಹಪ್ರಯಾಣಿಕರಾಗಿದ್ದ ಪರಿಚಯದವರ ಜೊತೆಗೆ ಅವರ ಮನೆಗೆ ಹೋದರು.

ಅದೊಂದು ಚಿಕ್ಕ ಜೋಪಡಿ ಪಟ್ಟಿ, ಅಲ್ಲಿ ಬೆಳಗಾದರೆ ಜಗಳ ರಾತ್ರೆಯಾದರೆ ಯುದ್ಧ! "ಅದೊಂದು ಭಯಂಕರವಾದ ಅನುಭವ. ಇದ್ಯಾವ ನರಕಕ್ಕೆ ಬಂದು ಸೇರಿದೆನಪ್ಪ ಅಂದುಕೊಂಡು ಅಲ್ಲಿ ಮೂರು ತಿಂಗಳ ಕಾಲ ಕಳೆದೆ", ನಗುತ್ತಾ ನೆನೆಯುತ್ತಾರೆ. ಪುನಃ ಬರೋಡಕ್ಕೆ ಹೋಗಿ ಎಂ.ಎ. ಮಾಡುವ ಆಲೋಚನೆ ಇತ್ತು. ಎಂ.ಎ.ಗೆ ಪ್ರವೇಶ ದೊರಕುವವರೆಗೆ ಗ್ರಾಫಿಕ್ ಸ್ಟುಡಿಯೋದಲ್ಲಿ ಅಸಿಸ್ಟೆಂಟ್ ಆಗಿ ಕೆಲಸ ನಿರ್ವಹಿಸಲು ಮಣಿಸರ್ ಸಲಹೆ ನೀಡಿದರು.

ಹೀಗೆ ಒಂದು ದಿನ ಮಣಿಸರ್ ಕರೆದು ವೀವರ್ಸ್ ಸರ್ವಿಸ್ ಸೆಂಟರ್‌ನಲ್ಲಿ ಕೆಲಸಕ್ಕೆ ಅರ್ಜಿ ಹಾಕಲು ಹೇಳಿದರು. ಕೆಲಸ ಸಿಕ್ಕು 1964ರಲ್ಲಿ ಎಸ್.ಎಸ್. ಮುನೋಳಿಯವರು ಬೆಂಗಳೂರಿಗೆ ಬಂದರು. "ಆ ನಂತರ ನಾನು ಬರೋಡಕ್ಕೆ ಹೋಗಲೇ ಇಲ್ಲ. ಆಗಾಗ ಹೋಗುತ್ತಾ ಇದ್ದಿದ್ದರೆ ಚೆನ್ನಾಗಿರುತ್ತಿತ್ತು," ತಮಗೇ ತಾವು ಮಾತನಾಡಿಕೊಂಡಂತೆ ಹೇಳುತ್ತಾರೆ ಮುನೋಳಿ.

'ವಿ-ಫೋರ್' (We-4)

1964ರಲ್ಲಿ ಕರ್ನಾಟಕ ರಾಜ್ಯ ಅಕಾಡೆಮಿಯ ಮೊದಲ ಕಲಾಪ್ರದರ್ಶನ ನಡೆದಿತ್ತು. ಹೆಚ್ಚಿನ ಚಿತ್ರಗಳು ನಕಲು ಮಾಡಿದಂತೆ ಕಾಣುತ್ತಿದ್ದ ಕಲಾಕೃತಿಗಳು, ಬರೋಡದಲ್ಲಿಯ ಕಲಾ ಚಟುವಟಿಕೆಗೂ ಬೆಂಗಳೂರಿನ ಸ್ತಬ್ಧ ವಾತಾವರಣವನ್ನು ಹೋಲಿಸಿ, ಈ ಊರಿನಲ್ಲಿ ಇರಬೇಕಾದರೆ ಏನಾದರೂ ಹೊಸತನ್ನು ಮಾಡಬೇಕು ಅನ್ನಿಸಿತು ಮುನೋಳಿಯವರಿಗೆ.

ಒಂದು ಸಂಜೆ ಗಾಂಧಿ ಬಜಾರ್‌ನ ವಿದ್ಯಾರ್ಥಿ ಭವನದ ದೋಸೆ ತಿಂದು ಹೊರಬರುತ್ತಿದ್ದ ಹಾಗೇ ಒಂದಷ್ಟು ದೂರದಲ್ಲಿ 'ಸ್ಕೂಲ್ ಆಫ್ ಆರ್ಟ್ಸ್' ಎಂಬ ಬೋರ್ಡು ಕಾಣಿಸಿತು. ಒಳಗೆ ಹೋದರು. ಹುಬ್ಬಳ್ಳಿಯಲ್ಲಿ ಆಗಲೇ ಪ್ರಚಾರದಲ್ಲಿದ್ದ ಮಿಣಜಿಗಿಯವರ ಕಲಾ ಶಾಲೆಯ ಶಾಖೆ ಇದಾಗಿತ್ತು. ಅಲ್ಲಿ ಮಿಣಜಿಗಿಯವರ ಜೊತೆ ಕಲಾವಿದ ಹಡಪದ್‌ರ ಪರಿಚಯವೂ ಆಯ್ತು. ಕಾಲಕ್ರಮೇಣ ಮುನೋಳಿಯವರೂ ಸೇರಿದಂತೆ ಇನ್ನೂ ಇತರ ಸ್ನೇಹಿತರ ಸಹಾಯದಿಂದ ಹಡಪದ್ ಅವರು ಸ್ವತಂತ್ರವಾಗಿ ಕಲಾ ಶಾಲೆಯೊಂದನ್ನು ಪ್ರಾರಂಭಿಸಿದರು. ಅದು 'ಕೆನ್ ಕಲಾಶಾಲೆ'.

ಸುಬ್ಬರಾಯರ ಕಲಾ ಮಂದಿರ, ಮಲ್ಲೇಶ್ವರದಲ್ಲಿ ನಂಜುಂಡರಾಯರು ನಡೆಸುತ್ತಿದ್ದ ಚಿತ್ರಕಲಾ ಪರಿಷತ್, ಹಡಪದ್ ಅವರ ಕೆನ್ ಸ್ಕೂಲ್ ಮತ್ತು ಉಳಿದ ಕಲಾ ಚಟುವಟಿಕೆಗಳನ್ನು ಗಮನಿಸಿದ ಮೇಲೆ, ಕರ್ನಾಟಕದಲ್ಲಿ ಕಲೆಯ ಸ್ಥಿತಿ ಉತ್ತಮಗೊಳ್ಳಬೇಕಾದರೆ ಹೊಸದೊಂದು ಚಳುವಳಿಯ ಅವಶ್ಯಕತೆಯನ್ನು ಮುನೋಳಿ ಅರಿತರು.

ಅಷ್ಟರಲ್ಲಿ ಸರ್ ಜೆ.ಜೆ. ಕಲಾ ಶಾಲೆಯಲ್ಲಿ ಕಲಿತಿದ್ದ ಟಿ.ಕೆ. ಪಟೇಲ್ ಅವರೂ ಬೆಂಗಳೂರಿಗೆ ವರ್ಗವಾಗಿ ಬಂದಿದ್ದರು. ಪಟೇಲ್, ಹಡಪದ್ ಮತ್ತು ಕಲಾವಿದ ಹುಬ್ಳೀಕರ್ ಅವರನ್ನೊಡಗೂಡಿ ಮುನೋಳಿಯವರೂ ಸೇರಿದಂತೆ 'ವಿ-ಫೋರ್' (We-4) ಎಂಬ ಹೊಸದೊಂದು ಗುಂಪು ಕಟ್ಟಿದರು. 'ವಿ-ಫೋರ್' ಎಂಬ ಹೆಸರನ್ನು ಆತ್ಮೀಯತೆಯಿಂದ ಹುಡುಕಿಕೊಟ್ಟರು ಕಲಾ ವಿಮರ್ಶಕರಾಗಿದ್ದ ಶ್ರೀ ಜಿ. ವೆಂಕಟಾಚಲಮ್. ವೆಂಕಟಾಚಲಮ್ ಅವರು ಆಗ ನೀಡಿದ ಸಹಾಯ, ಪ್ರೋತ್ಸಾಹಗಳನ್ನು ಮುನೋಳಿಯವರು ಪ್ರೀತಿಯಿಂದ ನೆನೆಯುತ್ತಾರೆ.

'ವಿ-ಫೋರ್'ನ ಮೊದಲ ಕಲಾ ಪ್ರದರ್ಶನ ರವೀಂದ್ರ ಕಲಾಕ್ಷೇತ್ರದ ವಿಶ್ರಾಂತಿ ಕೊಠಡಿಯಲ್ಲಿ ನಡೆಯಿತು. ಹಿರಿಯ ಕಲಾವಿದರಾದ ರುಮಾಲೆ ಚೆನ್ನಬಸವಯ್ಯ, ಕರಡಗಿ ಮುಂತಾದವರು ಹೊಸ ಹುರುಪಿನ ನಾಲ್ವರಿಗೆ ಪ್ರೋತ್ಸಾಹಿಸಿದರು. ಪ್ರದರ್ಶನವನ್ನು ಸಾರ್ವಜನಿಕರ ಅಪೇಕ್ಷೆಯ ಮೇರೆಗೆ ಒಂದು ವಾರ ಹೆಚ್ಚಿಸಬೇಕಾಯ್ತು. ಪ್ರದರ್ಶನ ಇದ್ದಷ್ಟು ದಿನ ಪತ್ರಿಕೆಗಳಲ್ಲಿ ಸತತವಾಗಿ ಈ ಕಲಾವಿದರನ್ನೂ, ಅವರ ಕಲಾಕೃತಿಗಳನ್ನೂ ಕುರಿತ ಲೇಖನಗಳು ಪ್ರಕಟಗೊಂಡವು.

ಆನಂತರ ಮುಂದೆ ಬಂದ ಎಲ್ಲಾ ನಾಲ್ಕೂ ವರ್ಷಗಳೂ ಸತತವಾಗಿ 'ವಿ-ಫೋರ್' ಕಲಾಪ್ರದರ್ಶನಗಳನ್ನು ಹಮ್ಮಿಕೊಂಡಿತು.

ಈ ಹೊತ್ತಿನಲ್ಲಿ ಕರ್ನಾಟಕದ ಕಲೆಯ ಬೆಳವಣಿಗೆಯಲ್ಲೇ ಹೊಸದೊಂದು ತಿರುವು ಸೃಷ್ಟಿಸಲು ಈ ಕಲಾವಿದರು ನೀಡಿದ ಕೊಡುಗೆ ಗಮನಾರ್ಹವಾದದ್ದು. ತಮಗಿಂತ ಕಿರಿಯ ಕಲಾವಿದರಿಗೆ ಸಲಹೆ, ಪ್ರೋತ್ಸಾಹಗಳನ್ನು ನೀಡುವುದಲ್ಲದೆ; ಕಲಾಸಕ್ತರು ಹಾಗೂ ಸಾಮಾನ್ಯರಲ್ಲಿ ಕಲೆಯನ್ನು ಕುರಿತಾಗಿ ಹೆಚ್ಚಿನ ಆಸಕ್ತಿ ಮತ್ತು ಸರಿಯಾದ ತಿಳುವಳಿಕೆಯನ್ನು ಬೆಳೆಸಲು 'ವಿ-ಫೋರ್' ಶ್ರಮಿಸಿತು.

ಮೊದಲ ಪ್ರದರ್ಶನದಲ್ಲಿ ಮುನೋಳಿಯವರು ಮಿಶ್ರ ಮಾಧ್ಯಮದಲ್ಲಿ 'ಡ್ರೀಂ ಸಿಟಿ' ಚಿತ್ರಗಳನ್ನು ಪ್ರದರ್ಶಿಸಿದ್ದರು. ಜೊತೆ ಜೊತೆಗೆ ಇಂಕ್ ಡ್ರಾಯಿಂಗ್, ಎಚ್ಚಿಂಗ್ ಮತ್ತು ಕೊಲಾಜ್‌ಗಳನ್ನೂ ಸತತವಾಗಿ ಮಾಡುತ್ತಾ ಬಂದರು.

ಈ ಪ್ರಪ್ರಥಮ ಕಲಾ ಪ್ರದರ್ಶನದ ಉಸ್ತುವಾರಿ ಕೆಲಸವನ್ನು ವಿನು ಆಹುಜ ಎಂಬ ಸ್ಫುರದ್ರೂಪಿ ಹೆಣ್ಣು ಮಗಳಿಗೆ ವಹಿಸಿಕೊಡಲಾಗಿತ್ತು. 'ವಿ-ಫೋರ್' ಮತ್ತು ಇಂಥಾ ಒಂದು ಕಲಾ ಚಟುವಟಿಕೆ ಹೊಸದಾಗಿದ್ದರಿಂದ ಜನ ಪದೇ ಪದೇ ಬಂದು ಪ್ರದರ್ಶನವನ್ನು ನೋಡಿ ಹೋಗುತ್ತಿದ್ದರು. "ಅಥವಾ ಅದಕ್ಕೊಂದು ವಿಶಿಷ್ಟವಾದ ಆಕರ್ಷಣೆಯಂತಿದ್ದ ವಿನು ಆಹುಜಳನ್ನು ನೋಡಲು ಬರುತ್ತಿದರೋ ಗೊತ್ತಿಲ್ಲ", ಎಂದು ನೆನೆದು ದೊಡ್ಡದಾಗಿ ನಗುತ್ತಾರೆ ಮುನೋಳಿಯವರು.

'ವಿ-ಫೋರ್'ನ ಪ್ರಚಾರ ಮತ್ತು ಪ್ರಭಾವಗಳಿಗೆ ಓಗೊಟ್ಟು ಹಲವಾರು ಕಲಾವಿದರು ಈ ಗುಂಪಿನಲ್ಲಿ ಸೇರುವ ಬಯಕೆ ವ್ಯಕ್ತಪಡಿಸಿದರು. ಹೀಗೆ 'ವಿ-ಫೋರ್' ನಿಧಾನವಾಗಿ 'ವಿ-ಫೋರ್ ಪ್ಲಸ್' ಎಂದು ವಿಸ್ತಾರಗೊಂಡಿತು. ಆಗ ಪೀಟರ್ ಲೂಯಿಸ್, ಶ್ರೀಕಾಂತ ಶೆಟ್ಟಿ ಹಾಗೂ ಜಸ್ಸು ರಾವಲ್ ಅವರು ಕಲಾಕೃತಿಗಳನ್ನು ಪ್ರದರ್ಶನದಲ್ಲಿ ಸೇರಿಸಿಕೊಳ್ಳಲಾಯಿತು. ಈ ಕಲಾಚಟುವಟಿಕೆಯೊಂದಿಗೆ ಸ್ಪಷ್ಟವಾಗಿ ಹಮ್ಮುತ್ತಿದ್ದ ಕಲಾ ಚಳುವಳಿಯಲ್ಲಿ ಸೇರಬೇಕೆಂಬುದೇ ಆಗ ಇದ್ದ ಉದಯೋನ್ಮುಖ ಕಲಾವಿದರ ಹೆಬ್ಬಯಕೆಯಾಗಿತ್ತು.

ಮೈಸೂರ್ ಆರ್ಟ್ಸ್ ಕೌನ್ಸಿಲ್

'ವಿ-ಫೋರ್' ಮುಂದೆ ತನ್ನ ವೈಶಾಲ್ಯವನ್ನು ಹೆಚ್ಚಿಸಿಕೊಂಡಂತೆ; 1972ರಲ್ಲಿ ಮೈಸೂರ್ ಆರ್ಟ್ಸ್ ಕೌನ್ಸಿಲ್ ಪ್ರತಿಷ್ಠಾಪನೆಗೊಂಡಿತು. ನಂತರ ಕೌನ್ಸಿಲ್‌ನ ಸದಸ್ಯರಾಗಿ ಹಲವಾರು ಕಲಾವಿದರು ಬೆಳಕಿಗೆ ಬಂದರು. ಭಾಸ್ಕರ್‌ರಾವ್, ರಮೇಶ್‌ರಾವ್, ಅಪ್ಪುಕುಟ್ಟಣ್ಣಾಚಾರಿ, ಜಸ್ಸು ರಾವಲ್, ಶೆಣೈ ಮುಂತಾಗಿ ಕರ್ನಾಟಕದಲ್ಲಿ ಕಲಾವಿದರಿಗೇನು ಕಡಿಮೆಯಿಲ್ಲ ಎಂಬುದನ್ನು ಸ್ಪಷ್ಟಪಡಿಸುವ ಹಾಗೆ 'ವಿ-ಫೋರ್' ಆರಂಭಿಸಿದ್ದ ಕಲಾ ಚಳುವಳಿ ಕಲಾ ಚಟುವಟಿಕೆಯನ್ನು ಬೆಳೆಸಿತು. 'ವಿ-ಫೋರ್'ನ ಪ್ರಥಮ ಪ್ರದರ್ಶನದ ಸಮಯದಲ್ಲಿ ಮಾಡರ್ನ್ ಆರ್ಟ್‌ನ್ನು ಪ್ರಶ್ನಿಸಿ ಡೆಕ್ಕನ್ ಹೆರಾಲ್ಡ್‌ನ ಕಾರ್ಟೂನಿಸ್ಟ್ ಮೂರ್ತಿಯವರು ಒಂದು ಕಾರ್ಟೂನ್ ರಚಿಸಿದ್ದರು. ಇದೇ ಮೂರ್ತಿಯವರೂ ಸಹ ನಂತರ ಮೈಸೂರ್ ಆರ್ಟ್ಸ್ ಕೌನ್ಸಿಲ್‌ನ ಸದಸ್ಯರಾದರು.

ಈ ಸಮಯದಲ್ಲೇ ರಾಯಚೂರಿನ ಶ್ರೀ ವೆಂಕಟೇಶ್ವರ ಲಾಡ್ಜ್‌ಗೆ ಒಂದು ಮ್ಯೂರಲ್ ರಚಿಸುವ ಯೋಜನೆ ದೊರಕಿತು. ಇದಕ್ಕೆ ಮುನೋಳಿಯವರ ಜೊತೆಗೆ ಪೀಟರ್ ಲೂಯಿಸ್, ಭಾಸ್ಕರ್‌ರಾವ್ ಹಾಗೂ ಜಸ್ಸು ರಾವಲ್ ಅವರು ಕೆಲಸ ಮಾಡಿದರು. ಈ ಮ್ಯೂರಲ್‌ನ ಕಲ್ಪನೆಯಿಂದ ಸ್ಥಾಪನೆಯವರೆಗೆ ಒಂದು ವಿಶಿಷ್ಟ ಅನುಭವ ಅನ್ನುತ್ತಾರೆ ಮುನೋಳಿಯವರು.

ಇಷ್ಟೊತ್ತಿಗಾಗಲೆ ಮದುವೆಯೂ ಆಗಿತ್ತು. ಇವರ ಶ್ರೀಮತಿಯವರು ಅಂದಿನಿಂದ ಇಂದಿನವರೆಗೆ ಬಹಳ ಪ್ರೀತಿ ಅಚ್ಚರಿಗಳಿಂದ ಮುನೋಳಿಯವರ ಎಲ್ಲ ಸಾಧನೆಗೂ ಮೌನವಾಗಿ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ.

ಬೆಂಗಳೂರಿನ ಚಿತ್ರಕಲಾ ಪ್ರಾಕಾರದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಾಗಲೇ ಮುನೋಳಿಯವರಿಗೆ ಅಲ್ಲಿಂದ ಕೇರಳಕ್ಕೆ ವರ್ಗವಾಯಿತು. ಕ್ರಮೇಣ ಮೈಸೂರು ಆರ್ಟ್ಸ್ ಕೌನ್ಸಿಲ್‌ನ ಮೂಲ ಸದಸ್ಯರೆಲ್ಲ ಬೇರೆ ಬೇರೆ ಊರುಗಳಿಗೆ ಹೋದ ಮೇಲೆ, ಸರಿಯಾದ ಪ್ರೋತ್ಸಾಹ ಸಲಹೆ ಇಲ್ಲದೆ; ಅದರ ಚಟುವಟಿಕೆಯೂ ಕುಂಠಿತಗೊಂಡದ್ದು ದುರದೃಷ್ಟದ ವಿಷಯ ಎನ್ನುತ್ತಾರೆ ಮುನೋಳಿ.

"ಆದರೂ ಕರ್ನಾಟಕದ ಕಲೆಯ ಬೆಳವಣಿಗೆಗಾಗಿ ನಾವು ದುಡಿದಿದ್ದರ ಫಲ, ನಮ್ಮ ನಂತರದ ಪೀಳಿಗೆಯವರು ಅನುಭವಿಸುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಹೆಮ್ಮೆ ತರುವ ವಿಚಾರ" ಎಂದು ಸಂತೋಷಪಡುತ್ತಾರೆ ಈ ಕಲಾವಿದ.

ಹಲವಾರು ಊರುಗಳನ್ನು ಕಂಡ ಈ ಕಲಾವಿದ ಈಗ ಹೈದರಾಬಾದಿನ ವೀವರ್ಸ್ ಸರ್ವಿಸ್ ಸೆಂಟರ್‌ನಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದಾರೆ.

ಮೂರು ಗಂಡು ಮಕ್ಕಳನ್ನೊಳಗೊಂಡ ಮುನೋಳಿ ಸಂಸಾರ ಕರ್ನಾಟಕದಲ್ಲೇ ನೆಲೆಯೂರುವ ನಿರ್ಧಾರ ಮಾಡಿದೆ. 1973ರಲ್ಲಿ ಕರ್ನಾಟಕವನ್ನು ಬಿಟ್ಟ ಇವರು ಹಲವಾರು ಪ್ರದರ್ಶನಗಳನ್ನು ಕರ್ನಾಟಕದಲ್ಲೂ ಹೊರ ರಾಜ್ಯಗಳಲ್ಲೂ ನೀಡಿದ್ದಾರೆ. ಆದರೆ ನೇರವಾಗಿ ದೀರ್ಘಕಾಲ ಕರ್ನಾಟಕದ ಕಲಾ ಚಟುವಟಿಕೆಯಿಂದ ದೂರವಿದ್ದದ್ದು ತಮಗೆ ಸಾಕಷ್ಟು ಖೇದವನ್ನುಂಟು ಮಾಡಿರುವುದಾಗಿ ಹೇಳುತ್ತಾರೆ. ಆಗ ಅವರಿಗಿದ್ದ ಜನ ಪರಿಚಯ, ಪ್ರಚಾರಗಳನ್ನು ಹಾಗೆ ಮುಂದುವರೆಸಿಕೊಂಡು ಬಂದಿದ್ದರೆ ಕಲಾವಿದರಾಗಿ ತಮ್ಮ ಕೊಡುಗೆ ಇನ್ನೂ ಹೆಚ್ಚಿನದಿರುತ್ತಿತ್ತು ಎಂದು ಶ್ರೀ ಎಸ್. ಎಸ್. ಮುನೋಳಿಯವರು ತಿಳಿದಿದ್ದಾರೆ.

ಮುನೋಳಿಯವರ ಪ್ರಕಾರ ಕಲಾವಿದ ಪ್ರಭಾವಗಳಿಗೊಳಗಾಗುವುದು ತಪ್ಪು ಆಗಲಾರದು. ಅದು ಕಲೆಯನ್ನು ಅರ್ಥೈಸಿಕೊಳ್ಳುವ ಬಹು ಮುಖ್ಯವಾದ ಮಾರ್ಗ ಮತ್ತು ಅತ್ಯವಶ್ಯಕ. ಪ್ರಭಾವಗಳನ್ನು ತಿರಸ್ಕರಿಸುವವರು ಕಲಾವಿದರೇ ಆಗಲಾರರು. ಯಾರಾದರೂ ಒಬ್ಬ ಕಲಾವಿದನನ್ನು ವಿಶಿಷ್ಟವಾಗಿ ಮೆಚ್ಚಿಕೊಂಡರೆ, ಅವನ ಕಲಾಕೃತಿಗಳ ಪ್ರಭಾವ ಸುಪ್ತ ಮನಸ್ಸಿನ ಮೇಲೆ ಪ್ರಭಾವ ಬೀರಿ ತಿಳಿದೋ ತಿಳಿಯದೆಯೋ ಅವನ ಕೃತಿಗಳಿಂದ ಆಕರ್ಷಿತರಾದ ಕಲಾವಿದರ ಕಲಾಕೃತಿಯಲ್ಲಿ ಮೈಗೂಡುತ್ತದೆ. ಆದರೆ ತಾಂತ್ರಿಕವಾಗಿ, ಕಾಂಪೊಸಿಷನ್, ಅರೇಂಜ್‌ಮೆಂಟ್ ಮತ್ತು ಆ ಪ್ರಭಾವವನ್ನು ಪಳಗಿಸಿಕೊಳ್ಳುವುದರಲ್ಲಿ ಭಿನ್ನವಾಗಿರಬೇಕು ಅನ್ನುತ್ತಾರೆ ಮುನೋಳಿ.

ಇವರ ಕೃತಿಗಳ ಮೇಲೆ ಪ್ರಭಾವ ಬೀರಿರುವ ಕೆಲವು ಅಂಶಗಳಲ್ಲಿ ರಾಂಕುಮಾರ್ ಅವರ ಫಿಗರೇಟಿವ್, ಕೆ.ಜಿ. ಸುಬ್ರಮಣ್ಯಂ ಅವರ ಸ್ಟಿಲ್ ಲೈಫ್, ಜ್ಯೋತಿ ಭಟ್ ಅವರ ಬಣ್ಣಗಳು ಮುಖ್ಯವಾದವು. ಕಲೆಯ ವ್ಯಾಕರಣ ಅರ್ಥವಾಗಬೇಕಾದರೆ ಕಲಾವಿದ್ಯಾಭ್ಯಾಸ ಬಹಳ ಮುಖ್ಯವೆಂದು ನಂಬಿರುವ ಮುನೋಳಿ, ಕಪ್ಪು- ಬಿಳುಪಿನ ಡ್ರಾಯಿಂಗ್ ಸುಲಭದ ಕೆಲಸವೇನಲ್ಲ ಎನ್ನುತ್ತಾರೆ.

ನೀಲಿ ಇವರ ಮೆಚ್ಚಿನ ಬಣ್ಣ. ಇವರ 'ಡ್ರೀಂ ಸಿಟಿ' ಚಿತ್ರಗಳಲ್ಲಿ ಇದನ್ನು ಕಾಣಬಹುದು. ಬಣ್ಣಗಳ ಪಾರದರ್ಶಕತೆಯು ಒಂದರಮೇಲೊಂದು ಹಬ್ಬಿ ಒಂದು ಬಣ್ಣಕ್ಕೆ ಇರುವ ಹಲವಾರು ಸಾಧ್ಯತೆಗಳನ್ನು ಇವರ ಚಿತ್ರಗಳು ಮೈಗೂಡಿಸಿಕೊಳ್ಳುತ್ತದೆ. ಕನಸಿನ ರಾಜ್ಯವನ್ನು ಅನುಭವಜನ್ಯವಾಗಿಸುವ ನೀಲಿಯ ಹಲವು ವಲಯಗಳಲ್ಲಿ ಸೃಷ್ಟಿಸುತ್ತಾ ಅಲ್ಲಲ್ಲಿ ಗುಂಪುಗುಂಪಾಗಿ ಹಲವು ಬಣ್ಣಗಳ ಚೌಕಗಳನ್ನು ಬೆರೆಸುತ್ತಾರೆ.

ಬಿಳಿ, ಕೆಂಪು, ಹಳದಿ, ಹಸಿರು... ಒಂದರ ಪಾರದರ್ಶಕತೆಯಿಂದ ಇಣುಕುವ ಮತ್ತೊಂದು ಬಣ್ಣದ ಆಟದಲ್ಲಿ ಮೂಡುತ್ತದೆ ಈ ಕನಸಿನ ಸಾಮ್ರಾಜ್ಯ.

ಬೆಳದಿಂಗಳ ಮೃದು ಬೆಳಕು ಮುನೋಲಿಯವರ ಚಿತ್ರದ ಪ್ರಮುಖ ಅಂಶ. ಇವರು ರಾತ್ರಿಯ ಮಂದ ಬೆಳಕಿನ ವಿವಿಧ ಮುಖಗಳನ್ನು 'ಡ್ರೀಂ ಸಿಟಿ'ಯಲ್ಲಿ ಸೆರೆ ಹಿಡಿಯುತ್ತಾರೆ.

ಈ ಸರಣಿಯಲ್ಲಿ; ದೂರಕ್ಕೆ ಎತ್ತರವಾಗಿನಿಂತ ಕೋಟೆ, ಅಗಲಕ್ಕೆ ಹರಡಿಕೊಂಡ ಊರು, ಊರಲ್ಲೊಂದು ಹುಲ್ಲುಗಾವಲು ಹಸಿರು, ವಿಶಾಲ ಆಕಾಶದ ನೀಲಿ, ಮಳೆಯ, ಮಂಜು ಮುಸುಕಿದ ಮಂಪರಿನ ಅನುಭವ ನೀಡುವ ಚಿತ್ರಗಳು, ವಿಶಿಷ್ಟವಾಗಿ ಎಸ್. ಎಸ್. ಮುನೋಳಿಯವರ ಶೈಲಿಯನ್ನು ಸಾರುತ್ತದೆ. ಮನಃಸ್ಥಿತಿಗೆ ತಕ್ಕಂತೆ ಬಣ್ಣಗಳು, ಆಕಾರಗಳು ಮೂಡುತ್ತವೆ ಎನ್ನುತ್ತಾರೆ ಈ ಕಲಾವಿದ.

1970ರ ಸಾಲಿನಲ್ಲಿ ರಚಿಸಿದ ಕಲಾಕೃತಿಗಳಲ್ಲಿ ಆಕಾರಗಳ ಜೋಡಣೆ (Composition of Foms) ಯನ್ನು ಹೆಚ್ಚು ಹೆಚ್ಚು ಬಳಸುತ್ತಿದ್ದರು. ಆ ಸಮಯದಲ್ಲಿ ರಚಿಸಿದ ಒಂದು ಕಲಾಕೃತಿಯಲ್ಲಿ ನಾನಾ ರೀತಿಯ ಕೋನಾಕಾರಗಳಿಗೆ ಕಪ್ಪು ಹಿನ್ನೆಲೆ ಕೊಟ್ಟು ಹಲವು ಕಡೆ ಬಿಳಿಯ ಅವಕಾಶವನ್ನು ಉಳಿಸಿಕೊಳ್ಳಲಾಗಿದೆ. ಕೇಸರಿ - ಹಳದಿ ಮಿಶ್ರಿತ ಆಕಾರಗಳನ್ನು, ದೃಶ್ಯವಕಾಶದಲ್ಲಿ ಸಮೀಕರಿಸಿ ವಿಭಿನ್ನ ಹಂತದ ದೃಗ್ಗೋಚರ ಅನುಭವವನ್ನು ಸೃಷ್ಟಿಸಲಾಗಿದೆ.

'ಡ್ರೀಂ ಸಿಟಿ' ಕ್ಯಾನ್ವಾಸಿನ ಮಧ್ಯದಲ್ಲಿ ಕೇಂದ್ರೀಕೃತವಾಗಿ ಆರಂಭವಾದದ್ದು, ಕ್ರಮೇಣ ವಿಸ್ತೃತಗೊಂಡು ಸುತ್ತಲ ಬಣ್ಣ, ಆಕಾರ, ಅವಕಾಶಗಳ ಜೊತೆಗೆ ಸಮ್ಮಿಳಿತಗೊಂಡು ಹೊಸ ರೂಪ ಪಡೆದದ್ದನ್ನು ಮುನೋಳಿಯವರ ಕೃತಿಗಳನ್ನು ಒಟ್ಟಾರೆ ಗಮನಿಸಿದರೆ ತಿಳಿಯುತ್ತದೆ. ಕಪ್ಪು, ಹಳದಿ, ಕೇಸರಿ ಬಣ್ಣಗಳ ತೇಪೆಯ ಜೊತೆಗೆ ಚಿಕ್ಕ ಚಿಕ್ಕ ಕೋನಾಕೃತಿಗಳನ್ನು ಬಿಳಿ, ಕಂದು, ಹಸಿರು, ನೀಲಿಯಲ್ಲಿ ಮೂಡಿಸಿ ಒಟ್ಟಿಗೆ ಜಕ್ಸಟ್ರಾಪೋಸ್ ಮಾಡಿದ್ದಾರೆ

1972ರ ಈ ಕೃತಿಗಳು ಕನಸಿನಂಥ ಲೋಕದ ಮೃದು ಅನುಭವವನ್ನು ಮೈಗೂಡಿಸಿಕೊಂಡಿದ್ದು; ಆಗಿನ ಕಲಾರಂಗಕ್ಕೆ ಅಪರಿಚಿತವಾಗಿದ್ದ ಹೊಸ ರೂಪವಾಗಿತ್ತು.

1970 ಮತ್ತು '80ರ ಮುಂಚೂಣಿಯಲ್ಲಿ ಮುನೋಳಿಯವರು ಫಿಗರೇಟಿವ್ ಚಿತ್ರಗಳನ್ನು ಹೆಚ್ಚಾಗಿ ಮಾಡಿದರು. 'ಫ್ಯಾಮಿಲಿ'-1973, 'ರ್‍ಯಾಗ್ ಪಿಕ್ಕರ್'-1976 ಮತ್ತು 1985ರ ಹೊತ್ತಿಗೆ ಮಾಡಿದ 'ದಿ ಪೋರ್ಟ್ರ್' ಎಂಬ ಶೀರ್ಷಿಕೆಯ ಪೈಂಟಿಂಗ್ ಮತ್ತು ಇಂಕ್ ಡ್ರಾಯಿಂಗ್‌ಗಳು ಕೆಲವು ಉದಾಹರಣೆ.

ಆ ನಂತರ ಬೆಂಗಳೂರಿಂದ, ಕೇರಳಕ್ಕೆ, ಅಲ್ಲಿಂದ ಭುವನೇಶ್ವರಕ್ಕೆ ಪುನಃ ವಿಜಯವಾಡಕ್ಕೆ ಹೀಗೆ ವರ್ಗವಾಗುತ್ತಾ ಹೋದ ಸಮಯದಲ್ಲಿ ಮುನೋಳಿಯವರು 'ಏಮ್‌ಲೆಸ್ ಆಕ್ಟಿವಿಟಿ' (Aimless Activity) ಎಂಬ ಶೀರ್ಷಿಕೆಯಲ್ಲಿ ಒಂದಷ್ಟು ಡ್ರಾಯಿಂಗ್‌ಗಳನ್ನು ಮಾಡಿದರು. ಈ ಇಂಕ್ ಡ್ರಾಯಿಂಗ್‌ಗಳನ್ನು ಕಲಾವಿದರ ವಿಭಿನ್ನ ಮನಃಸ್ಥಿತಿಯನ್ನು ಯಶಸ್ವಿಯಾಗಿ ಸೆರೆಹಿಡಿದಿದೆ.

1985ರಲ್ಲಿ ರಚಿಸಿದ 'ಹಾಂಟೆಡ್ ಹೌಸ್' ಎಂಬ ಕೃತಿಯ ಬಗ್ಗೆ ಸ್ವಲ್ಪ ಹೇಳುವುದು ಅವಶ್ಯಕ. ಇದು ನೀಲಿ ಮತ್ತು ಬೂದು ಬಣ್ಣಗಳ ವರ್ಣ ಛಾಯೆ (tones)ಯ ಸುಂದರ ಚಿತ್ರ. ಇದರ ಹಿನ್ನೆಲೆಯಲ್ಲಿ ಬರುವ ಬಿಳಿ ಮತ್ತು ತಿಳಿ ನೀಲಿ ಬಣ್ಣಗಳು ಒಂಟಿತನ ಮತ್ತು ಪ್ರಶಾಂತ ವಾತಾವರಣದ ಭಾವವನ್ನು ಸೆರೆಹಿಡಿಯುತ್ತದೆ. ಬಣ್ಣಗಳು ಒಂದರ ಮೇಲೊಂದು ನಿರೂಪಿಸುವ ಪಾರದರ್ಶಕತೆಯಿಂದ ಸುಂದರವಾದ ನಿಬಿಡತೆಯ ಸ್ವರೂಪ ಸಾಧಿಸಲಾಗಿದೆ. ಒಂದು ಬಣ್ಣದ ಹಲವು ಸ್ವರೂಪಗಳನ್ನು (tones) ಈ ಚಿತ್ರದಲ್ಲಿ ಕಾಣಬಹುದು.

ಈ ಸರಣಿಯ ಚಿತ್ರಗಳ ನಂತರ ಪುನಃ 1995ರಲ್ಲಿ 'ಡ್ರೀಂ ಸಿಟಿ' ಚಿತ್ರಗಳು ಮರುಕಳಿಸಿದ್ದನ್ನು ಗಮನಿಸಬಹುದು. ಹೀಗೆ ಮುನೋಳಿಯವರ ಒಟ್ಟು ಕಲಾ ಸರಣಿಯನ್ನು ಆವರ್ತ ರೂಪದಲ್ಲಿ ಕಾಣಬಹುದು.



'ಪ್ರಕೃತಿ ಚಿತ್ರ'
'Landscape'



'ಡ್ರೀಮ್ ಸಿಟಿ'
'Dream City'



'ಪ್ರಕೃತಿ ಚಿತ್ರ'
'Landscape'



'ಡ್ರೀಮ್ ಸಿಟಿ'
'Dream City'



'ಹಾನ್‌ಟೆಡ್ ಹೌಸ್'
'Haunted House'



'ಫ್ಯಾಮಿಲಿ'
'Family'



'ಹೋಲ್ಡ್ ಚರ್ಚ್'
'Old Church'



'ಪ್ರಕೃತಿ ಚಿತ್ರ'
'Landscape'



'ಹಾನ್‌ಟೆಡ್ ಹೌಸ್'
'Haunted House'



'ಬಿತ್ತಿ ಚಿತ್ರ'
'The Mural'



‘ಪ್ರಕೃತಿ ಚಿತ್ರ’
‘Landscape’



‘ಇಂಕ್ ಡ್ರಾಯಿಂಗ್’
‘Ink Drawing’

Munoli
Peter Luis
Bhaskar Rao
at Work
▼





▲
ಎಸ್.ಎಸ್. ಮುನೋಳಿ S.S. Munoli

S.S. MUNOLI

S. SHIVA MUNOLI is one of the important names to be mentioned among the initiators who encouraged modern art movement in Karnataka. Munoli, always enthusiastic to experiment with the medium and achieve something new was responsible in bringing a new wave into the art scenario in Karnataka during early sixties.

TO BEGIN WITH

S. S. Munoli was born at Wagdari a small village on the Karnataka - Maharashtra border area in 1941. This area belonging to Sholapur district, was highly influenced by the Marathi speaking region. His ancestors hailed from Munoli, a village in Gulbarga. Shiva Munoli had his primary education in the Marathi medium. His father was a business merchant who grew tourdal and sold it. Mother was humble lady who took care of the entire family. During the time of the bifurcation of districts in the border area. Their lands remained in the area that came under Maharashtra and the house was towards Karnataka. So Muoli's early childhood imbibed experiences from the soils.

The place where they used to live did not have any Kannada school as the region was previously governed by the Maharaja of Arkalkote who was a Maratha. This Maharaja had encouraged education in Marathi medium and the same system had continued for a few more years. In these schools, drawing was compulsory subject till the intermediate in those days. This helped young Shiva to develop his interest in art.

Shiva was always interested in painting, drawing and making toys and other crafty materials. During the Ganesh festival he used to make the idols himself. The idols were made in clay, freshly brought from the tank bed. These idols were painted with the then available primary colours and gold powder in water. He not only made idol for his house, but also for friends and neighbours. This was an event to remembered as the activity itself gave colours to the festival. He had to frequently face the angry elders as his drawing in charcoal decorated the walls and the floors of the house.

Holi was another event to remember. The young battalion of the village led by Shiva used to steal wood, dried cowdung rols, fruits and coconuts from the village backyards and farms. He still remembers at times how they were caught by the elders red-handed and punished. Shiva was scared of deep waters and avoided to learn swimming untill one day when some of his friends pushed him into the village well; and taught how to swim. "Nostalgic are those days with tender memories of childhood", remembers Munoli.

Shiva's uncle who lived in Sholapur was interested in astrology. He through one of the well known astrologers he found that the art field in which Shiva was interested was the right direction for his career. One of the uncle's working as a principal at Gulbarga also recognised his interest in fine arts and there upon encouraged and supported him allthrough. After completing eleventh standard at Sholapur, Munoli applied for the fine arts college at the M. S. University, Baroda. As his family has the lands in one state and the house in the other, they letters they used to receive always reached late to them. The same was the plight of the interview letter sent to Munoli from Baroda. It reached him only after the date of the interview. Utterly disappointed Munoli wrote to the Fine Arts College principal explaining what had happened and requested to give him a chance. Following which a special interview was conducted for Munoli.

The interview panel had Prof. Bendre from painting, Prof. Shanku Chaudhary from the Sculpture Department, Pancholi from the commercial arts. He was asked to paint a landscape of rainy season in the memory drawing test and then a still life. "Then they never used to give marks, we were gauged on the grades we got like, A, B+, B-, C., etc and I was selected in the B+ grade", he recalls. In 1959 S. S. Munoli joined the fine arts college at the M. S. University, Baroda as a student.

THE UNFORGETTABLE DAYS IN BARODA

Munoli was a innocent village boy in a simple shirt, white pyjamas and bare foot when he went to Baroda.

As the hostel accommodation was yet to be provided, he had to stay with a family friend studying in the Medical co college. Though Dr. Doddavarad Matt was very nice to Munoli, his friends were amused to see this humbly dressed boy. Some of them thought that the doctor must have brought this boy to work for him as a servant and the others had even teased the Doctor sarcastically enquiring about the guest. At college, the whole experience of the English speaking boys and girls from the elite families left him spell bound. With his rural background, Munoli who had rarely seen girls speacking to boys, found there was no such discrimination here. Students from the royal families and from far off countries were very common at the school. If not for the love and affection of his classmates, it would have been difficult for young Munoli to shed the inferiority complex he had developed after coming to Baroda. By then he had got his hostel accommodation and gradually thing turned out to be quite positive for Munoli.

For him every moment spent in Baroda was a new experience. Being the youngest student of the batch, his batchmates called him 'Munna'. For Munoli who had thought that painting a sign board or coping a picture itself as art; the days spent in Baroda exposed him to the different dimensions of art.

He was introduced to various forms and mediums of art; like painting, graphic, sculpture and drawing. He always liked to paint the landscapes.

Baroda school then was surrounded by lengthy medows and green pastures. Most of the time occupied by cattle and buffallo grasers. When they had to go for spot sketching, they would

say that they were going for cattle grasing. The zoo opposite Kamati Bagh was also a favorite place for spot sketching. When the other art colleges insisted on the figurative mode of work, the Baroda school gave more freedom for new expressions. It had eminent artists like K.G. Subramanian, Jyothi Bhat, Shanku Choudhary and others as the faculty; who were the working artists and were themselves in search of a new expression.

Munoli's group had ten students of the batch; favorite and popular among the teachers. Gopal Gupta, Suresh Seth, Patel Bowalekar, Dalawadi, Meera Dixit, Rama Surathi, Khimani, Hakim and Munoli were among them.

In the initial stages, Munoli's works were more figurative. Gradually it changed when his inclination towards the non - figurative expression grew more stronger. He realised the subtleties of the painting as a medium in Baroda. He was taught the 'Goldenline theory' of aesthetics that talks about the approach to the form in relation with the visual space. He learnt that the distortion also needs to be proportionate. Figure distortion demands a proper understanding of figure making and a thorough knowledge of human anatomy. He still remembers Prof. Bendre saying, "Artists have two ways to learn art. One is to study the works by the great masters and the other is to observe, understand and copy the nature". These words impressed young Munoli, who firmly believes, observation is an aspect very essential for an artist to imbibe the experience and recreate it.

Aesthetics of Art was the tough subject. It was taught in Gujarathi by Prof. Shastry: who had written a book on aesthetics in Gujarathi. The students were expected to learn Gujarathi or take the help of the Gujarathi students after class to know what was taught in the class. Munoli's knowledge of the Marathi script was useful to read Gujarathi as they were resembling to each other.

Van Gogh and Picasso were his favorite artists. He appreciated their urge to show something new. He was deeply influenced by Van Gogh's picture composition, colour strokes and the handling of the medium; especially in the land scapes.

Studying in Baroda gave an opportunity for curious Munoli to meet people and artists working with varied exposures and experiences. He had attended demonstration classes conducted by artists like V.M. Mali and K.K. Hebbar. Artists from America, Europe and other Asian countries visited the Baroda school and showed their works. All this taught Munoli, how essential was the formal training in art.

Munoli narrates an incident when Prof. Shanku Chaudhary had got a commissioned work to make a Gandhi statue of twenty-four feet in height. All the students would gather at the place where the casting was in progress. Everything was fine till they started casting the head. Every time they casted, the head either had a hole in it or came out split into two halves.

Sometimes the nose would not be there or an ear missing. It was not an easy job to cast Gandhi's head! By the time a perfect head was casted; 'the Gandhi's head had taken the form of a joke. If anybody had found the work they were doing had not come as they had expected, they would gruble murmuring, "Gandhi ka sair"

Teachers and students together used to dance Garbha in the evenings. Dasara was the time for melas and merry evenings. Folk singers were invited and made to sing. Steps outside the graphic studio was the place for this. Munoli never came home during the summer vacations. He spent there in the studio working with other students and teachers. Among the friends, Gowalekar was more inclined towards portrait, still lifes and other realistic works. Patel was good at composition and Munoli enjoyed rapid sketching. The friends together would discuss about each other's works, during which they criticised and gave comment; this helped each other to work hard and a pleasant working environment was established.

Munoli would received Rs. 60/- from the home for his expenditure. "Rs 30 would be spent on the mess bill and the rest disappeared just like that", he says with a loud laughter. The vacation time was an opportunity for the s tudents who stayed back in Baroda to have a closer look at the working method of their teachers. They used to spend more time assisting their teachers. Prof. Shanku Choudhary had contacts with the Alembic - Sarabhai Chemicals. He recommended some of the students to do a part time job at the factory. The work was to count the received medicines and fill it into the packets. For this they would receive Rs. 200.00 - 300.00 which took care of all the extra expenditures.

Thus the days spent in Baroda was a wonderful experience. Days had passed swiftly and in no time, S. S. Munoli had passed his B.A. in fine arts from the M.S. University in 1963. On the day their results were announced it was K. G. Subrahmanian who congratulated him on his achievement and had given a hundred rupee note asking Munoli to buy sweets and distribute among all others. This is an unforgettable moment for Munoli.

After returning from Baroda to his home town, Munoli stayed there for three months and then moved to Mumbai in search of a job. One of the old friends whomd he met on the train suggested that Munoli could stay with him till he got an accommodation else where. As Mumbai was a new place for Munoli and he had no place to stay, he accepted the offer immediately. He had got a job in textile agency. The friend took him to the place where he lived. It was conjusted tiny hut in a sub-urban slum. For Munoli, going back home after the work was a nightmare. The moment he reached near the slum, he had to be prepared to witness quralles and fights. The bad abuses were a part of the day to day living there. Life became hell for Munoli. He could neither concentrate on his creative work nor could he live in peace. After spending three months in Mumbai, Munoli decided to take admission for the M.A fine arts in Baroda and continue his studies. While he waited for his admission he worked in the graphic department as an assistant. One day prof. K.G. Subramanyam brought to his notice a job vacancy in the weavers services centre and asked him to apply. After securing a job at the WSC, Munoli was posted to Bangalore.

THE BANGALORE ART SCENE AND THE 'WE-4'

The first art exhibition of the State Academy was organised in 1964. Most of the works displayed were copy works and represented a very poor art activity compared to the progressed art scenario of the Baroda school. Munoli's first response was to think of doing something that could activate the art scene in Karnataka, the then Mysore State.

One evening as he walked down the road from the 'Vidhyarthi Bhavan' hotel in Gandhi Bazzar; he noticed a board 'The School of Arts'. This was a branch of the famous art school run by Minijigi in Hubli. There he met Minijigi and Hadapad. Later on Munoli also visited Kalamandira headed by Subba Rao. After knowing the methods of teaching adopted by these art schools, Munoli felt there was a necessity to revies the whole activity and create a new canvas that could answer to the questions raised by the developing art trends.

During this time T.K. Patel trained from the Sir JJ School of arts, Bombay was transferred to Bangalore. Munoli, T.K. Patel, Srikanth Shetty and Hublikar would meet at the 'Ken School of Arts' started by R.M. Hadapad. Hadapad, Hublikar and Patel were very enthusiastic to join hands with Munoli and planned to start a new art movement that could help enrich the art scene. Thus came into existence the concept of "We- Four".

G. Venkatachalam, freedom fighter and the then art critic was the one who suggested the mane 'We - Four' and had always helped them all through remembers Munoli. The information and Publicity office had also helped them in many ways. The group 'We - 4' and the idea behind its iniciation was welcomed by artists and art lovers of Bangalore. 'We - 4' had its first exhibition at the Ravindra Kalakshetra lounge in 1966. This was the period when the modern art was not considered seriously and was said to be bogus. The 'We - 4' group at the inaugural made it a point to stress that their main intention was to "initiate a new movement in painting, based on the modern trends in world art and to make art both progressive and powerful". (quoted from Deccan Herald - December 1966) During the inaugural speech G. Venkatachalam had said that the finest of our painters have turned to modern art as they had found in it an opportunity for self expression.

Senior artists like Rumale Channabasavaiah, Karadagi and others had appreciated the four young artists for their works and the responsibility they had taken. Media was kind enough to give a good publicity and the exhibition was extended on public demand. The first exhibition was supervised by a good looking young lady, Vinu Ahuja who took initiative to be at the Gallery and introduce the works to the public who needed more explanation. "She was very beautiful, sometimes we doubred weather people visited the gallery again and again to see the new kind of paintings or to see Ms. Vinu.

In the first exhibition Munoli had displayed the 'Dream city' series. His 'Van Gogh Blue' was on the centre of attraction.

Simultaneously he worked in ink drawings, etchings, collages and other mediums of expression. The We-Four group not only established its existance as an important movement represented by the four artists but also encouraged and educated the younger generation of artists. Thus was capable to give a new dimention to the already existing art scenario. This is a period to be remembered in the retrospective of the art in Karnataka.

THE MYSORE ART COUNCIL

As more and more artists were attracted towards this new development, gradually We-4 gave way for three more artists - peter Lewis, Jasu Rawal, and Srikanth Shetty and took a new form as "We-four plus".

The movement initiated by Munoli and friends had grown vast and had spread althrough the State. Almost all the working artists of that time were influenced by is this movement; and were egar to participate in the art activity headed by Munoli and his artist friends. To accommodate more number of artists in to the movement, The Mysore Art Council was formulated in 1972. Bhaskar Rao, Ramesh Rao, Appukuttannachari, Shenoy and many more young and serious artists joined the council. Deccan Herald cartoonist, Mr. Murthy who had made fun of the modern art during the first show of the We-4 had joined the council. The Mysore Art Council continued the art activity nurtured by the We-4.

During this time Munoli along with Peter Lewis, Jasu Rawal and Bhaskar Rao worked on a mural commissioned for hotel Venkateshwara Lodge at Raichur. The time they had spent together right from the inception of the idea for the mural to its installation is an unforgettable experience remembers Munoli. He was married by this time. He wife has been affectionately supporting his creative endeavour since then...

When he had achieved a proper recognition among the artists, art lovers, buyers and the then contemporary art scene, he was transferred to Kerala. In 1973 he left Karnataka. This abrupt departure and the long absence from the art scene during its peak time has by and large affected his career as an artist. With the confidence he had and the contancts he had established, Munoli feels things would have been entirely different for his if he had continued staying in Bangalore.

Once the founder members had dispersed due to various reasons, the activities of the Mysore Art Council was desolated. Though this was disappointing; Munoli feels he and his friend could achieve their aspirations at least to certain extent. The seed sown by their hard work had ripped fruits for the generation that followed.

From Kerala he was transferred to Assam, Bhuvaneshwar, Vijayawada and then to Hyderabad. He has exhibited his works in Karnataka, Andhra Pradesh, in different other states in India and abroad. After a long tiresome journey, the artist S.S. Munoli now with his wife and three children lives in Hyderabad. He still works at the Weavers Service Centre as an assistant director of designs. Apart from all the ebb and tide, S.S. Munoli's contribution to the Karnataka art scenario is distinctive.

THE ART

According to Munoli, influence of other artists is an important aspect every artist has to go through. It is one of the modes of understanding art. One who denies the influences can never become an artist he says. If a student of art immensely appreciates artist, and is influenced by his work is imbibed into the works of the student. Unknowingly the unconscious imbibes the activity surrounding us and blends the experiences with our own expression, says Munoli. But the artist has to overcome this and retain his individual expression in the technique, composition, arrangement of form and space, handling of the medium etc. Munoli says he was influenced by Ramkumar's figurative, K.G. Subramanian's still lifes and Jyothi Bhat's colour compositions. He believes, one need to have an academically formal training in fine arts to know its grammer and the language.

Blue is his favorite colour. Tender tones of red, green, yellow and white formulate to create cubical forms and geometrical shapes in his works. Misty dreamy quality is brought in by the soft light captured in the painting. The tones of the deep blue creates depth and vastness in the visual space. Munoli was more interested in portraying landscapes of the moon lit nights. One can feel the calm, cool and a serene atmosphere in his works, especially in the dream city series.

The 'Dream City' reoccurred in his body of work at different stages taking different forms. 1970's was a period when he experimented with the composition of forms. One of the paintings of this time has geometrical forms assimilated in a black background. The white space is retained as the associated yellow and orange are organised in the visual space to create varied levels of visual perspectives.

The dream city emerging from the centre of the canvas gradually spread wide relating to other colours and space around the form. Black, orange and yellow patches juxtraposed with small geometrical forms in white,. brown, blue and green. This series of 1972 had shed the dreamy tenderness in the work, but was something different to the then art scene.

In the late 70's and early 80's inclination towards the figurative expression can be observed in Munoli's works. 'Family' 1973, in oil had three human forms. 'Rag Picker' 1976 and 'The Fort' 1985 are some of the examples.

At the time of his transfers from Bangalore to Kerala, then to Bhuvaneshwar and Vijayawada.... Munoli did a series of drawings called 'The Aimless Activities'. These ink drawings suggest varied moods of the artist.

'The Haunted House', painted in 1985 is one of his works that needs a mentioning here. This is a painting with the blue - grey tones. white background with light blue tinge depicts a sad silent lonely mood. The overlapping colours that gain translucency, achieve a fine textural gradation for the painting. Varied tones of a colours can be felt in this work.

This series after a decade was again followed by 'The Dream City' paintings in 1995. with the reoccurring of the forms, themes and the ideas, S.S. Munoli's body of work can be viewed as an expression completing a cycle.

●●●

BIO-DATA

Name	:	**S.S. MUNOLI**
Born	:	24th February 1941
Qualifications	:	Passed SSLC in 1959, Secured B.A. Degree in (Painting) Fine Arts in 1963 from M.S. University of Baroda.
Membership	:	Founder Member of "WE FOUR" Group of Bangalore and "MYSORE ART COUNCIL".
Exhibitions	:	Participation in all Major Art Exhibition from time to time since 1964. 1. Exhibition in Contemporary Paintings by Young South India Artists - sponsored by Max-Muller Bhavan, Bangalore. 2. Participated in Exhibition of Contemporary Indian Art at Paris, Brussel, Copenhegan and Europe. 3. Participating in "Mysore Dasara Exhibition" from 1967 onwards. 4. Participated in "Traffic Week" Exhibition organised by Police Department at Bangalore in 1971. 5. Participated in Gujarat State Academy Exhibition in 1964. 6. Participat in A.P. State Lalithakala Academy Exhibition in 1981. 7. Participated in All India Drawing Exhibition in 1981, organised by A.P. Council of Artists. 8. Participated in All India Drawing & Graphic Exhibition at Gulbarga in 1983 sponsored by G.M.C.
Shows	:	Conducted "We Four" group show at Bangalore in 1966, 1967, 1968 and 1970. "Mysore Art Council" Exhibition in 1971, 1972, 1973 and 1974 at Bangalore, in 1973 at Udipi and Bombay. "Saptarishi" Group Show in 1973 at Hyderabad. Four Select Exhibition at Bombay Taj Art Gallery in 1970 & 1972, Group Show at Bangalore in 1983 & 1985.
Awards	:	Mysore State Lalithakala Academy Award in 1967, 1969, 1970 & 1972 D.Y.C.O. Award in 1969. All India Exhibition Prize in 1968 organised by M.C.K.P., Bangalore.
Collections	:	Paintings are in collection in private as well as in public in India and abroad.

My motivation in painting and drawing to convey a familiar image or not some time to the viewer, and yet leave enough unsaid to arouse curiosity and interest. The viewer may feel the general mood, Impression and Image my painting reveals. I generally have no preconceived idea or formulated plan. When I begin to paint, my painting begins by rapidly composing shapes on the canvas using a large brush. Areas of colour texture and movement and unity. All non essential laboring of detail is avoided. I am very much inspired by the Moon Light effects, I don't believe to copy nature as it is. But to create beauty and simplicity in nature. I may have a note book and some sketches about subjects and nature later develop in my style and experience.



▲ 'ಎಚ್ಚಿಂಗ್' 'Etching'

ಡ್ರೀಮ್ ಸಿಟಿ' 'Dream City' ▶

▼ 'ಫಾರಮ್ಸ್' 'Forms'

